15. Commissioner for Bangalore Mahanagara Palike, N.R Square, Bangalore-2.
16. Commissioner of Police, Infantry Road, Bangalore.
17. State Level Coordinator, Indian Oil Company Limited, No.29, P.Kalinga Rao Road, Bangalore.27.
18. Deputy Secretary (Cabinet), DPAR, Vidhana Soudha, Bangalore.
19. S.G.file/Spare copies.

	unauthorized LPG kits and detachable cylinders by October 2004.	
4	Introduction of "No Pollution Under Control Certificate- No Fuel" Scheme in petrol/diesel dispensing stations by October 2004.	Karnataka State Pollution Control Board in coordination with Transport Department
5	Setting up of electronic Emission Testing Centers (ETCs) in each petrol bunk to be introduced from 1.12.2003 onwards wherever feasible.	Transport Department
6	Increase sales tax and to impose entry tax on white kerosene (Superior Kerosene Oil) to curb adulteration with petrol.	Food and Civil Supplies and Finance Department
7	Strengthening strict vigilance and surveillance actions in order to check adulteration of fuel.	Food and Civil Supplies
8	To make mandatory for kerosene whole sellers to register themselves and produce end use certificates before Civil Supplies Department.	Food and Civil Supplies Department
9	To establish 5 Auto LPG Dispensing Stations (ALDS) in Bangalore city by March 2004.	Food and Civil Supplies Department and State Level Oil Coordinator.
10	To convert 5 roads into one way by Home Department by March 2004.	Home Department
11	To construct 2 flyovers and one railway under pass by March 2004 as proposed by the concerned Departments.	Urban Development Department.
12	To increase fleet size of Bangalore Metropolitan Transport Corporation from 3106 at present buses to around 4330 buses by the end of October 2005.	Bangalore Metropolitan Transport Corporation.
13	Karnataka State Pollution Control Board to install one On-line Ambient Air Quality Monitoring Station by June 5, 2004.	Karnataka State Pollution Control Board.
14	Karnataka State Pollution Control Board to take action to promote use of cleaner fuels used by major industries in DG sets and boilers.	Karnataka State Pollution Control Board.

The concerned implementing agencies are directed to comply and furnish monthly action taken report to the Secretary, (Environment & Ecology), Forest, Ecology and Environment Department without fail.

By order and in the name of
Governor of Karnataka
Sd/-
(V.R.Gaikwad)
Under Secretary to Government,
Forest, Ecology and Environment Department.

(62) (29)

PROCEEDINGS OF THE GOVERNMENT OF KARNATAKA

Subject: Measures to combat Air Pollution in Bangalore City.
Read: Recommendations of the 7th Task Force Meeting on Control of Air Pollution of City held on 02.09.2003.

Preamble:

The Hon'ble Supreme Court of India on 14.08.2003 while dealing with Writ Petition No. 13029/1985 (Civil-PIL) (M.C Mehta Vs Union of India and others has observed alarming levels of pollution in 7 cities of the country including, among others Bangalore city. Further, it has also observed that the most critical form of pollution in Bangalore city is Respirable Suspended Particulate Matter (RSPM). The Hon'ble Supreme Court has directed that the State shall draw up a plan of action for lowering the rate of RSPM level in Bangalore City to be placed before the Environment Pollution (Prevention and Control) Authority.

The issue was discussed in the 7th Task Force Meeting on Control of Air Pollution in Bangalore City held on 2.09.2003. The proposed Air Quality Improvement Action Plan for Bangalore City within Outer Ring Road limits of Bangalore along with the recommendation of the task force (vide reference above) and inputs from concerned Departments have been duly considered by Government. The approved action plan needs to be complied by the concerned implementing Departments within the scheduled time-frame. Hence the order:

Government Order No:FEE 120 ECO 2002 Bangalore, Dated:02-12-2003.

In view of the circumstances explained in the preamble Government hereby records approval for Air Quality Improvement Action Plan as drawn up below for Bangalore City within Outer Ring Road limits of Bangalore with directions to all concerned authorities to take all necessary steps for implementation and report compliance within the time frame scheduled.

Sl. No.	Air Quality Improvement Action Plan for Bangalore City within Outer Ring Road limits of Bangalroe	Implementing Agency
1	Mandatory conversion of in-use 3-wheelers registered after 1.04.1991 onwards to bi-fuel mode (such as LPG and petrol) in a phased manner from 1.12.2003 onwards with authorized LPG kits and fixed LPG cylinders.	Transport Department
2	Register only new 3-wheelers having bi-fuel mode (such as LPG and petrol) only from 1.12.2003 onwards.	Transport Department
3	To take action for conversion of nearly 35,000 auto rickshaws which are running with	Transport Department

ಅನುಬಂಧ–5

ಮಂಡಳಿಯು ಬೆಂಗಳೂರು ನಗರವಲ್ಲದೇ ರಾಜ್ಯದ 19 ಪ್ರಮುಖ ನಗರಗಳಲ್ಲಿ ಒಟ್ಟು 22 ಕೇಂದ್ರಗಳಲ್ಲಿ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಮಾಡುತ್ತಿದೆ.

ಕರ್ನಾಟಕದ ಇತರೆ ಜಿಲ್ಲೆಗಳಲ್ಲಿ 2017–18 ರ ಅವಧಿಯಲ್ಲಿ ಪರಿವೇಷ್ಟಕ ವಾಯುಗುಣ ಮಟ್ಟದ ವಾರ್ಷಿಕ ಸರಾಸರಿ ಪ್ರಮಾಣದ ವಿವರ

Sl No.	Location	SO2 µg/M3	NO2 µg/M3	PM 10 µg/M3	PM2.5 µg/M3	NH3 µg/M3	Pb µg/M3	AQI	
1	ಪ್ರಾದೇಶಿಕ ಕಛೇರಿ, ಮಂಡ್ಯ	2.1	14.5	42.8	24.0	10.4	0.002	43	ಉತ್ತಮ
2	ಪ್ರಾದೇಶಿಕ ಕಛೇರಿ, ಮೈಸೂರು	2.3	16.6	46.4	25.0	11.2	0.002	46	ಉತ್ತಮ
3	ಪ್ರಾದೇಶಿಕ ಕಛೇರಿ, ಮಡಿಕೇರಿ	2.1	13.1	35.4	18.5	7.1	0.001	35	ಉತ್ತಮ
4	ಪ್ರಾದೇಶಿಕ ಕಛೇರಿ, ಚಿತ್ರದುರ್ಗ	2.3	4.5	47.5	17.1	4.9	0.030	48	ಉತ್ತಮ
5	ವಿ.ಐ.ಎಸ್.ಎಲ್, ಭದ್ರಾವತಿ	2.4	4.5	36.3	18.2	6.6	0.027	36	ಉತ್ತಮ
6	ಪ್ರಾದೇಶಿಕ ಕಛೇರಿ, ದಾವಣಗೆರೆ	2.6	4.5	47.5	21.2	4.7	0.030	48	ಉತ್ತಮ
7	ಕೆ.ಆರ್. ವೃತ್ತ, ಮೈಸೂರು	2.2	16.8	53.3	28.0	13.3	0.004	53	ತೃಪ್ತಿಕರ
8	ಪ್ರಾದೇಶಿಕ ಕಛೇರಿ, ಕೋಲಾರ	2.0	31.0	**72.3**	36.6	31.9	0.138	72	ತೃಪ್ತಿಕರ
9	ಪ್ರಾದೇಶಿಕ ಕಛೇರಿ, ಚಾಮರಾಜನಗರ	2.1	17.3	59.1	30.2	12.3	0.004	59	ತೃಪ್ತಿಕರ
10	ಪ್ರಾದೇಶಿಕ ಕಛೇರಿ, ಹಾಸನ	5.1	19.4	33.1	31.3	2.0	BDL	52	ತೃಪ್ತಿಕರ
11	ಬೈಕಂಪಾಡಿ ಕೈಗಾರಿಕಾ ಪ್ರದೇಶ, ಮಂಗಳೂರು.	8.3	10.3	**69.8**	**45.6**	BDL	0.173	76	ತೃಪ್ತಿಕರ
12	ಹೆಚ್.ಪಿ.ಎಫ್. ಇನ್‌ಟೇಕ್ ಪಾಯಿಂಟ್, ರಾಣೆಬೆನ್ನೂರು	2.5	4.5	46.1	19.3	7.7	0.020	87	ತೃಪ್ತಿಕರ
13	ಪ್ರಾದೇಶಿಕ ಕಛೇರಿ, ಧಾರವಾಡ	5.2	21.4	**67.2**	27.8	23.7	*	67	ತೃಪ್ತಿಕರ
14	ಗೋಕುಲ್ ರೋಡ್– ಹುಬ್ಬಳ್ಳಿ	5.6	26.4	**89.2**	34.2	25.8	*	89	ತೃಪ್ತಿಕರ
15	ಪ್ರಾದೇಶಿಕ ಕಛೇರಿ, ಬೆಳಗಾಂ	2.0	15.4	**79.3**	**40.2**	*	*	79	ತೃಪ್ತಿಕರ
16	ಸರ್ಕಾರಿ ಆಸ್ಪತ್ರೆ ಆವರಣ, ಕಲಬುರ್ಗಿ	2.3	24.0	**65.6**	**42.0**	*	*	70	ತೃಪ್ತಿಕರ
17	ಪ್ರಾದೇಶಿಕ ಕಛೇರಿ, ರಾಯಚೂರು	2.6	12.3	**98.3**	38.6	19.1	*	98	ತೃಪ್ತಿಕರ
18	ಪ್ರಾದೇಶಿಕ ಕಛೇರಿ, ಬಳ್ಳಾರಿ	4.8	11.5	51.8	20.5	*	*	52	ತೃಪ್ತಿಕರ
19	ಸಿ.ಎಂ.ಸಿ, ಬಳ್ಳಾರಿ	4.9	11.6	57.9	25.3	*	*	58	ತೃಪ್ತಿಕರ
20	ಪ್ರಾದೇಶಿಕ ಕಛೇರಿ, ಬೀದರ್	2.0	19.7	**101.9**	**54.7**	*	*	101	ಸಾಧಾರಣ
21	ಪ್ರಾದೇಶಿಕ ಕಛೇರಿ, ತುಮಕೂರು	2.0	31.3	**118.1**	**56.0**	31.9	0.114	112	ಸಾಧಾರಣ
22	ಮೋತಿ ಟಾಕೀಸ್, ದಾವಣಗೆರೆ	5.3	10.0	**164.6**	*	9.4	0.040	143	ಸಾಧಾರಣ
	ರಾಷ್ಟ್ರೀಯ ಶಿಷ್ಟತೆಗಳು	**50**	**40**	**60**	**40**	**100**	**0.500**		

2017–18 ನೇ ಸಾಲಿನಲ್ಲಿ PM_{10} ರ ಪ್ರಮಾಣವು ರಾಜ್ಯದ 9 ನಗರಗಳಾದ ಕೋಲಾರ, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರ್ಗಿ, ರಾಯಚೂರು, ಬೀದರ್, ತುಮಕೂರು ಮತ್ತು ದಾವಣಗೆರೆ ನಗರಗಳಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ(60.0 µg/M3)ಗಿಂತ ಹೆಚ್ಚಿದೆ. $PM_{2.5}$ ರ ಪ್ರಮಾಣವು ಮಂಗಳೂರು, ಬೆಳಗಾವಿ, ಕಲಬುರ್ಗಿ, ಬೀದರ್ ಮತ್ತು ತುಮಕೂರು ನಗರಗಳಲ್ಲಿ ಹೆಚ್ಚಿರುವುದು ಕಂಡುಬಂದಿದೆ. 2017–18 ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣವು ರಾಷ್ಟ್ರೀಯ ಮಿತಿಯೊಳಗಿದೆ. ವಾಯು ಗುಣಮಟ್ಟ ಸೂಚ್ಯಂಕವು ಮಂಡ್ಯ, ಮೈಸೂರು, ಮಡಿಕೇರಿ ಮತ್ತು ಭದ್ರಾವತಿ ನಗರಗಳಲ್ಲಿ ಉತ್ತಮವಾಗಿದೆ. ಕೋಲಾರ, ಚಾಮರಾಜನಗರ, ಹಾಸನ, ಮಂಗಳೂರು, ರಾಣೆಬೆನ್ನೂರು, ಹುಬ್ಬಳ್ಳಿ, ಬೆಳಗಾವಿ, ರಾಯಚೂರು, ಕಲಬುರ್ಗಿ ಮತ್ತು ಬಳ್ಳಾರಿ ನಗರಗಳಲ್ಲಿ ತೃಪ್ತಿಕರವಾಗಿದ್ದು, ಬೀದರ್, ತುಮಕೂರು ಮತ್ತು ದಾವಣಗೆರೆ ನಗರಗಳಲ್ಲಿ ಸಾಧಾರಣವಾಗಿದೆ.

ಟಿಪ್ಪಣಿ: *– ಮಾಪನ ಮಾಡಲಾಗಿರುವುದಿಲ್ಲ.

ಉತ್ತಮ (0–50)	ಕನಿಷ್ಠ ಪರಿಣಾಮ	ಕಳಪೆ (201–300)	ಜನರಿಗೆ ದೀರ್ಘಕಾಲಿಕ ಉಸಿರಾಟದ ಅಸ್ವಸ್ಥತೆ
ತೃಪ್ತಿಕರ (51–100)	ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ	ಅತ್ಯಂತ ಕಳಪೆ (301–400)	ಜನರಿಗೆ ಉಸಿರಾಟದ ಅಸ್ವಸ್ಥತೆ
ಮಧ್ಯಮ (101–200)	ಶ್ವಾಸಕೋಶ, ಹೃದಯ ಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ	ತೀವ್ರ (>401)	ಆರೋಗ್ಯವಂತ ಜನರಿಗೂ ಉಸಿರಾಟದ ಅಸ್ವಸ್ಥತೆ

ಫಲಿತಾಂಶಗಳ ಸಂಕ್ಷಿಪ್ತ ಸಾರಾಂಶ:

1. ಮಾಪನ ಮಾಡಿದ ಅಂಕಿ ಅಂಶಗಳಲ್ಲಿ ಗಂಧಕದ ಡೈ ಆಕ್ಸೈಡ್ (SO_2), ಅಮೋನಿಯ ಮತ್ತು ಸೀಸ ರಾಷ್ಟ್ರೀಯ ಮಿತಿಗಿಂತ (50.0 $\mu g/M^3$) $\mu g/M^3$), (100.0 $\mu g/M^3$) and (0.5 $\mu g/M^3$) ಕ್ರಮವಾಗಿ ಕಡಿಮೆ ಇರುತ್ತದೆ.
2. ಮಾಪನ ಮಾಡಿದ ಅಂಕಿ ಅಂಶಗಳಲ್ಲಿ ಸಾರಜನಕದ ಡೈ ಆಕ್ಸೈಡ್ (NO_2) ನಗರ ರೈಲು ನಿಲ್ದಾಣ ಹೊರತುಪಡಿಸಿ ಉಳಿದ ಎಲ್ಲಾ ಸ್ಥಳಗಳಲ್ಲಿ ರಾಷ್ಟ್ರೀಯ ಮಿತಿಗಿಂತ (40.0 $\mu g/M^3$) ಕಡಿಮೆ ಇರುತ್ತದೆ.
3. ~~ಮಾಪನ ಮಾಡಿದ ಅಂಕಿ ಅಂಶಗಳಲ್ಲಿ ಧೂಳಿನ ಕಣಗಳ ಗಾತ್ರ 2.5 ಮೈಕ್ರಾನ್ ($PM_{2.5}$) ಕೆ.ಆರ್. ವೃತ್ತ, ಆಮ್ಕೋ ಬ್ಯಾಟರೀಸ್, ಬಾಣಸವಾಡಿ ಪೊಲೀಸ್ ಸ್ಟೇಶನ್ ಮತ್ತು ನಿಮ್ಹಾನ್ಸ್ ಹೊರತುಪಡಿಸಿ ಉಳಿದ ಎಲ್ಲಾ~~ ಸ್ಥಳಗಳಲ್ಲಿ ರಾಷ್ಟ್ರೀಯ ಮಿತಿ (40.0$\mu g/M^3$) ಗಿಂತ ಹೆಚ್ಚಾಗಿರುತ್ತದೆ.
4. ಮಾಪನ ಮಾಡಿದ ಅಂಕಿ ಅಂಶಗಳಲ್ಲಿ ಧೂಳಿನ ಕಣಗಳ ಗಾತ್ರ 10 ಮೈಕ್ರಾನ್ (PM_{10}) ಸಾಣೆಗುರುವನಹಳ್ಳಿ ಹೊರತುಪಡಿಸಿ ಉಳಿದ ಎಲ್ಲಾ ಸ್ಥಳಗಳಲ್ಲಿ ರಾಷ್ಟ್ರೀಯ ಮಿತಿ (60.0 $\mu g/M^3$) ಗಿಂತ ಹೆಚ್ಚಾಗಿರುತ್ತದೆ.
5. ಮಾಪನ ಮಾಡಿದ ಒಟ್ಟು 16 ಸ್ಥಳಗಳಲ್ಲಿ ವಾಯುಗುಣಮಟ್ಟ ಸೂಚ್ಯಂಕವು ಸಾಣೆಗುರುವನಹಳ್ಳಿಯಲ್ಲಿ ಉತ್ತಮವಾಗಿದ್ದು, 9 ಸ್ಥಳಗಳಲ್ಲಿ ತೃಪ್ತಿಕರವಾಗಿದೆ ಮತ್ತು 6 ಸ್ಥಳಗಳಲ್ಲಿ ಮಧ್ಯಮವಾಗಿದೆ.
6. ಧೂಳಿನ ಕಣಗಳ ಗಾತ್ರ 10 ಮೈಕ್ರಾನ್ (PM_{10}) ಮತ್ತು ಧೂಳಿನ ಕಣಗಳ ಗಾತ್ರ 2.5 ಮೈಕ್ರಾನ್ ($PM_{2.5}$)ಗಳ ಮಟ್ಟವು ವಾಹನ ಸಂಚಾರ, ರಸ್ತೆ ಧೂಳು ಮತ್ತು ಕಟ್ಟಡ ನಿರ್ಮಾಣ

ಅನುಬಂಧ-2

2017-18ರ ಅವಧಿಯಲ್ಲಿ ಬೆಂಗಳೂರು ನಗರದಲ್ಲಿನ 16 ಕೇಂದ್ರ/ಸ್ಥಳಗಳಲ್ಲಿ ಪರಿವೀಕ್ಷಕ ವಾಯುಗುಣಮಟ್ಟದ ವಾರ್ಷಿಕ ಸರಾಸರಿ ಪ್ರಮಾಣಗಳು

ಕ್ರ.ಸಂ	ಸ್ಥಳ	SO_2 µg/m^3	NO_2 µg/m^3	PM_{10} µg/m^3	$PM_{2.5}$ µg/m^3	NH_3 µg/m^3	lead µg/m^3	CO mg/m^3	AQI	
1	ನಿ.ಪ.ವಾ.ಮಾ.ಕೇಂದ್ರ, ಸಾಣೆಗುರುವನಹಳ್ಳಿ	2.2	24.0	50.4	*	*	*	0.5	50	ಉತ್ತಮ
2	ಬೆಂಗಳೂರು ವಿಶ್ವವಿದ್ಯಾಲಯ	4.0	11.0	25.0	*	*	*	*	25	ಉತ್ತಮ
3	ಅರ್ಬನ್ ಎಕೋ ಪಾರ್ಕ್, ಪೀಣ್ಯ	2.0	31.9	95.2	44.2	31.0	0.150	*	95	ತೃಪ್ತಿಕರ
4	ಸ್ವಾನ್ ಸಿಲ್ಕ್, ಪೀಣ್ಯ ಕೈಗಾರಿಕಾ ಪ್ರದೇಶ	2.0	32.0	96.6	44.8	32.1	0.133	*	97	ತೃಪ್ತಿಕರ
5	ಯಶವಂತಪುರ ಪೊಲೀಸ್ ಠಾಣೆ	2.0	33.0	95.0	44.5	32.7	0.101	*	95	ತೃಪ್ತಿಕರ
6	ಅಮ್ಕೋ ಬ್ಯಾಟರೀಸ್, ಮೈಸೂರು ರಸ್ತೆ	2.0	32.7	86.1	39.9	33.6	0.202	*	86	ತೃಪ್ತಿಕರ
7	ಬಾಣಸವಾಡಿ ಪೊಲೀಸ್ ಠಾಣೆ	2.0	24.3	68.7	32.0	20.7	0.145	*	69	ತೃಪ್ತಿಕರ
8	ಮಾದವಚಾರಿ ಮನೆ, ಕಾಜಿಸೊಣ್ಣೇನಹಳ್ಳಿ, ಬೆಂಗಳೂರು	2.0	30.6	69.0	*	29.8	0.196	*	69	ತೃಪ್ತಿಕರ
9	ಯು.ವಿ.ಸಿ.ಇ, ಕೆ.ಆರ್ ವೃತ್ತ	2.0	23.8	70.9	34.5	21.8	0.132	*	71	ತೃಪ್ತಿಕರ
10	ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು	2.0	31.7	65.3	40.0	32.1	0.083	*	67	ತೃಪ್ತಿಕರ
11	ಇಂದಿರಾಗಾಂಧಿ ಮಕ್ಕಳ ಆರೋಗ್ಯ ಕೇಂದ್ರ, ನಿಮ್ಹಾನ್ಸ್	2.0	31.9	65.6	30.4	32.0	0.085	*	66	ತೃಪ್ತಿಕರ
12	ಎಕ್ಸ್‌ಪೋರ್ಟ್ ಪ್ರಮೋಶನಲ್ ಪಾರ್ಕ್, ಐಟಿಪಿಎಲ್	2.0	31.7	103.9	50.8	30.9	0.148	*	103	ಸಾಧಾರಣ
13	ರೈಲು ಗಾಲಿ ಮತ್ತು ಅಚ್ಚು ಕಾರ್ಖಾನೆ- ಯಲಹಂಕ	2.0	29.7	101.9	65.8	30.3	0.118	*	119	ಸಾಧಾರಣ
14	ಸೆಂಟ್ರಲ್ ಸಿಲ್ಕ್ ಬೋರ್ಡ್, ಹೊಸೂರು ರಸ್ತೆ	2.0	32.0	118.8	*	33.5	0.104	*	113	ಸಾಧಾರಣ
15	ನಿ.ಪ.ವಾ.ಮಾ.ಕೇಂದ್ರ, ನಗರ ರೈಲ್ವೆ ನಿಲ್ದಾಣ	7.5	52.0	100.9	*	*	*	1.3	101	ಸಾಧಾರಣ
16	ಟೆರ್ರಿ ಕಛೇರಿ, ದೊಮ್ಮಲೂರು	2.0	32.4	118.4	52.1	30.8	0.182	*	112	ಸಾಧಾರಣ
	ಶಿಷ್ಟತೆಗಳು	50.0	40.0	60.0	40.0	100.0	0.5	2.0		

- **ಅಪಾಯಕಾರಿ ತ್ಯಾಜ್ಯ ನಿರ್ವಹಣೆ:**

ರಾಜ್ಯದಲ್ಲಿ ಅಪಾಯಕಾರಿ ತ್ಯಾಜ್ಯ ಉತ್ಪಾದಿಸುವ 3134 ಘಟಕಗಳನ್ನು ಗುರುತಿಸಲಾಗಿದೆ. ಈ ಅಪಾಯಕಾರಿ ತ್ಯಾಜ್ಯದ ಸಂಸ್ಕರಣೆ ಮತ್ತು ಪುನರ್ಬಳಕೆಗಾಗಿ 166 ಘಟಕಗಳಿಗೆ ಅನುಮತಿ ನೀಡಲಾಗಿದೆ. ಅಪಾಯಕಾರಿ ತ್ಯಾಜ್ಯವನ್ನು ಸಿಮೆಂಟ್ ಘಟಕಗಳಲ್ಲಿ ಸುಡಲು 9 ಸಿಮೆಂಟ್ ಕಾರ್ಖಾನೆಗಳಿಗೆ ಅನುಮತಿ ನೀಡಲಾಗಿದೆ. ಅಲ್ಲದೆ 6 ಸಾಮೂಹಿಕ ಅಪಾಯಕಾರಿ ತ್ಯಾಜ್ಯ ಸುಡುವ ಘಟಕಗಳಿಗೆ ಅನುಮತಿ ನೀಡಲಾಗಿದೆ. ಭೂ–ಭರ್ತಿ ಮಾಡುವ ಅಪಾಯಕಾರಿ ತ್ಯಾಜ್ಯದ ಸಲುವಾಗಿ 2 ಘಟಕಗಳು ರಾಜ್ಯದಲ್ಲಿ ಸ್ಥಾಪನೆಯಾಗಿವೆ.

- **ಘನ ತ್ಯಾಜ್ಯ ನಿರ್ವಹಣೆ:**

ಸ್ಥಳೀಯ ಸಂಸ್ಥೆಗಳು ತಮ್ಮಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯವನ್ನು ಘನ ತ್ಯಾಜ್ಯ ನಿರ್ವಹಣೆ ಕಾಯ್ದೆ, 2016 ರನ್ವಯ ನಿರ್ವಹಿಸಲು ಕ್ರಮ ಕೈಗೊಳ್ಳಬೇಕಾಗಿದೆ. ರಾಜ್ಯದಲ್ಲಿ ಪ್ರತಿದಿನ 11,186 ಟನ್ ಕಸ ಉತ್ಪತ್ತಿಯಾಗುತ್ತಿದೆ. ರಾಜ್ಯದಲ್ಲಿರುವ 67 ಸ್ಥಳೀಯ ಸಂಸ್ಥೆಗಳು ಕಸ ವಿಲೇವಾರಿ ಘಟಕ ಸ್ಥಾಪನೆಗೆ ಸ್ಥಳ ಗುರುತಿಸಿರುವುದಿಲ್ಲ. ಅವುಗಳಲ್ಲಿ ಹೊಸದಾಗಿ ಸೇರ್ಪಡೆಯಾದ ಸ್ಥಳೀಯ ಸಂಸ್ಥೆಗಳು ಸೇರಿರುತ್ತವೆ.

- ಬೆಂಗಳೂರಿನಲ್ಲಿ ಕಸ ವಿಲೇವಾರಿಗಾಗಿ 9 ಘಟಕಗಳಿದ್ದು, ಅವುಗಳ ಸಂಸ್ಕರಿಸುವ ಸಾಮರ್ಥ್ಯವು ಪ್ರತಿದಿನ 3350 ಟನ್‌ಗಳಾಗಿರುತ್ತದೆ. ಬೆಂಗಳೂರಿನಲ್ಲಿ ಉತ್ಪತ್ತಿಯಾದ RDF ಅನ್ನು ಸಿಮೆಂಟ್ ಕಾರ್ಖಾನೆಗಳಲ್ಲಿ ಮರುಬಳಕೆ ಮಾಡುವಂತೆ ಮಂಡಳಿಯು ಕ್ರಮ ಕೈಗೊಂಡಿದೆ.

- ಎಲ್ಲಾ ಮೂಲಭೂತ ಸೌಕರ್ಯಗಳಾದ ಅಪಾರ್ಟಮೆಂಟ್, ವಾಣಿಜ್ಯ ಸಮುಚ್ಚಯಗಳು ತಮ್ಮಲ್ಲಿಯೇ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವಂತೆ ಮಂಡಳಿಯು ನೀಡುತ್ತಿರುವ ಸಮ್ಮತಿ ಪತ್ರದಲ್ಲಿ ಷರತ್ತು ವಿಧಿಸಲಾಗುತ್ತಿದೆ.

- ಮಂಡಳಿಯು ನಗರಾಭಿವೃದ್ಧಿ ಇಲಾಖೆಗೆ ಘನ ತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತ ಬಫರ್ ಜೋನ್ ನಿಗದಿಪಡಿಸಲು ಸೂಚಿಸಲಾಗಿದೆ.

6. ಜಿಲ್ಲಾಧಿಕಾರಿಗಳು (ಬೆಂಗಳೂರು ನಗರ) ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೆರೆಯ ಗಡಿಯನ್ನು ಮೀಸಲಿರಿಸತಕ್ಕದ್ದು.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಷ್ಟ್ರೀಯ ಜಲ ಗುಣಮಟ್ಟ ಪರಿಶೀಲನಾ ಕಾರ್ಯಕ್ರಮದ (NWMP) ಅಡಿಯಲ್ಲಿ ರಾಜ್ಯದಲ್ಲಿನ ಪ್ರಮುಖ ನದಿಗಳಾದ ಕಾವೇರಿ, ತುಂಗ, ಭದ್ರ, ತುಂಗಭದ್ರ, ಘಟಪ್ರಭ, ಮಲಪ್ರಭ, ಭೀಮ ಮತ್ತು ಕೃಷ್ಣ ನದಿಗಳು, ಉಪನದಿಗಳು ಮತ್ತು ತೊರೆಗಳಲ್ಲಿನ ನೀರಿನ ಗುಣಮಟ್ಟವನ್ನು ಮಂಡಳಿಯು 98 ಸ್ಥಳಗಳಲ್ಲಿ ಪ್ರತಿ ತಿಂಗಳು ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣಾ ವರದಿಯನ್ನು ತಯಾರಿಸಿ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಗೆ ಹಾಗೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸುತ್ತಿದೆ. ಪ್ರಸ್ತುತ ನದಿ ನೀರಿನ ಗುಣಮಟ್ಟದ ವಿಶ್ಲೇಷಣಾ ವರದಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಿದೆ.

ರಾಜ್ಯದ ಪ್ರಮುಖ ನದಿಗಳು ಹಾಗೂ ಉಪನದಿಗಳಲ್ಲಿ 17 ಕಲುಷಿತಗೊಂಡಿರುವ ಪ್ರದೇಶಗಳ ವ್ಯಾಪ್ತಿಯ ಪುನಶ್ಚೇತನ ಮಾಡಲು ದಿನಾಂಕ: 20.9.2018 ರಂದು, ಮಾನ್ಯ ಹಸಿರು ನ್ಯಾಯ ಪೀಠ, ನವದೆಹಲಿ, ನದಿ ನೀರಿನ ಗುಣಮಟ್ಟದ ವಿಶ್ಲೇಷಣೆಯ ಆಧಾರದ ಮೇಲೆ ಹಾಗೂ ಬಿ.ಓ.ಡಿ <3 ಮಿ.ಗ್ರಾಂ/ಲೀ ಮತ್ತು ಫೀಕಲ್ ಕೋಲಿಫಾರ್ಮ್<500 ಎಂ.ಪಿ.ಎನ್/100 ಮಿಲೀ ಒಳಗೆ ನದಿ ನೀರಿನ ಗುಣಮಟ್ಟವನ್ನು ಕಾಯ್ದುಕೊಳ್ಳಲು ಆರು ತಿಂಗಳೊಳಗೆ ನಾಲ್ಕು ಸದಸ್ಯರನ್ನೊಳಗೊಂಡ ನದಿ ಪುನಶ್ಚೇತನ ಸಮಿತಿಯನ್ನು ರಚಿಸಲು ನಿರ್ದೇಶಿಸಿದೆ. ಸದರಿ ನಿರ್ದೇಶನದಂತೆ ರಾಜ್ಯ ಸರ್ಕಾರವು ನವೆಂಬರ್ 24, 2018 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಜೀವಿಪರಿಸ್ಥಿತಿ ಮತ್ತು ಪರಿಸರ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ 4 ಸದಸ್ಯರನ್ನೊಳಗೊಂಡ "ನದಿ ಪುನಶ್ಚೇತನ ಸಮಿತಿ" ಯನ್ನು ರಚಿಸಿದೆ. ಸದರಿ ಸಮಿತಿಯು ದಿನಾಂಕ:3.12.2018 ರಂದು ಸಭೆ ನಡೆಸಿ, ರಾಜ್ಯದಲ್ಲಿ ಮಲಿನಗೊಂಡಿರುವ 17 ನದಿಗಳ ಪ್ರದೇಶಗಳ ವ್ಯಾಪ್ತಿಯನ್ನು ಪುನಶ್ಚೇತನ ಮಾಡಲು ಕರಡು ಕ್ರಿಯಾ ಯೋಜನೆಗಳನ್ನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ, ನಿಗಧಿತ ಅವಧಿಯೊಳಗೆ ಅನುಷ್ಠಾನಗೊಳಿಸಿ ಮಾನ್ಯ ಹಸಿರು ನ್ಯಾಯ ಪೀಠ, ನವದೆಹಲಿಗೆ ಸಲ್ಲಿಸುವ ಬಗ್ಗೆ ಕ್ರಮ ಕೈಗೊಳ್ಳಲು ತೀರ್ಮಾನಿಸಿದೆ.

- ಇ- ತ್ಯಾಜ್ಯ ನಿರ್ವಹಣೆ :

ರಾಜ್ಯದಲ್ಲಿ ಕೇಂದ್ರ ಅರಣ್ಯ, ಪರಿಸರ ಹವಾಮಾನ ಬದಲಾವಣೆ ಮಂತ್ರಾಲಯವು ಪ್ರಕಟಿಸಿರುವ ಇ-ತ್ಯಾಜ್ಯ ನಿರ್ವಹಣಾ ನಿಯಮವನ್ನು ಜಾರಿಗೊಳಿಸಲಾಗಿದೆ. ರಾಜ್ಯದಲ್ಲಿ ಇ-ತ್ಯಾಜ್ಯ ನಿರ್ವಹಣೆ ಮಾಡುವ 102 ಘಟಕಗಳಿಗೆ ಮಂಡಳಿಯಿಂದ ಅನುಮತಿ ನೀಡಿದ್ದು, ಹಾಲಿ 75 ಘಟಕಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ಉತ್ಪತ್ತಿಯಾಗುವ ಇ-ತ್ಯಾಜ್ಯದ ಪ್ರಮಾಣದ ಅಧ್ಯಯನದ ಕಾರ್ಯವನ್ನು EMPRI ಸಂಸ್ಥೆಗೆ ವಹಿಸಲಾಗಿದೆ.

- ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣೆ:

ರಾಜ್ಯದಲ್ಲಿ 32,364 ಜೀವ ವೈದ್ಯಕೀಯ ತ್ಯಾಜ್ಯವನ್ನು ಉತ್ಪಾದನಾ ಮಾಡುವ ಘಟಕಗಳಿದ್ದು, ಅವುಗಳಿಂದ ಪ್ರತಿದಿನ ಅಂದಾಜು 67 ಟನ್ ಜೀವ ವೈದ್ಯಕೀಯ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಈ ಜೀವ ವೈದ್ಯಕೀಯ ತ್ಯಾಜ್ಯವನ್ನು ಸಂಸ್ಕರಿಸಿ ವಿಲೇವಾರಿ ಮಾಡಲು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 26 ಸಾಮೂಹಿಕ ಸಂಸ್ಕರಣಾ ಘಟಕಗಳಿದ್ದು, ಇನ್ನೂ 4 ಘಟಕಗಳ ಸ್ಥಾಪನೆಗಾಗಿ ಮಂಡಳಿಯು ಅನುಮತಿ ನೀಡಿರುತ್ತದೆ.

- ಶಬ್ದ ಮಾಲಿನ್ಯ:

ಬೆಂಗಳೂರಿನಲ್ಲಿ 10 ನಿರಂತರ ಶಬ್ದ ಪರಿಶೀಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳು ವಾಣಿಜ್ಯ, ಕೈಗಾರಿಕಾ ವಸತಿ ಮತ್ತು ಸೂಕ್ಷ್ಮ ಪ್ರದೇಶಗಳನ್ನು ಪ್ರತಿನಿಧಿಸುತ್ತವೆ. ಶಬ್ದ ಮಾಪನ ಮಾಪಕಯಂತ್ರವನ್ನು ಎಲ್ಲಾ ದೊಡ್ಡ ಗಾತ್ರದ ಕೈಗಾರಿಕೆಗಳಿಗೆ ಕಡ್ಡಾಯ ಮಾಡಲಾಗಿದೆ. ಮಂಡಳಿಯು ದೂರುಗಳನ್ನು ಸ್ವೀಕರಿಸಿದಾಗ ಶಬ್ದ ಮಟ್ಟವನ್ನು ಮಾಪನ ಮಾಡಿ ದತ್ತಾಂಶವನ್ನು ಪೋಲೀಸು ಇಲಾಖೆಗೆ ಕರ್ನಾಟಕ ಸರ್ಕಾರದ ಶಬ್ದ ಮಾಲಿನ್ಯ (ಹತೋಟಿ ಮತ್ತು ನಿಯಂತ್ರಣ) ನಿಯಮ, 2000 ರಡಿಯಲ್ಲಿ ನೀಡಲಾದ ಅಧಿಸೂಚನೆ ಸಂಖ್ಯೆ. ಎಫ್‌ಇಇ 46 ಇಎನ್‌ವಿ 2000, ದಿನಾಂಕ: 13.8.2002 ರಂತೆ ಕ್ರಮ ಕೈಗೊಳ್ಳಲು ಒದಗಿಸಲಾಗುವುದು.

2017–18 ನೇ ಸಾಲಿನ ಬೆಂಗಳೂರು ನಗರದಲ್ಲಿನ ಹತ್ತು ಮಾಪನ ಕೇಂದ್ರಗಳ ಶಬ್ದಮಟ್ಟದ ದತ್ತಾಂಶವನ್ನು **ಅನುಬಂಧ–6** ರಲ್ಲಿ ಲಗತ್ತಿಸಿದೆ.

- ಜಲ ಮಾಲಿನ್ಯ:

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಷ್ಟ್ರೀಯ ಜಲ ಗುಣಮಟ್ಟ ಪರಿಶೀಲನಾ ಕಾರ್ಯಕ್ರಮದ (NWMP) ಅಡಿಯಲ್ಲಿ 125 ಕೆರೆಗಳ ನೀರಿನ ಗುಣಮಟ್ಟ ಪರಿಶೀಲನೆ ಮಾಡುತ್ತಿದೆ. ಬೆಂಗಳೂರು ಮತ್ತು ರಾಜ್ಯದ ಪ್ರಮುಖ ನಗರಗಳಲ್ಲಿರುವ ಕೆರೆಗಳ ನೀರಿನ ಮಾದರಿಗಳನ್ನು ಪ್ರತಿ ತಿಂಗಳು ಸಂಗ್ರಹಿಸಿ ಮಂಡಳಿಯು ವಿಶ್ಲೇಷಣೆ ಮಾಡುತ್ತಿದೆ ಮತ್ತು ಸಂಬಂಧಪಟ್ಟ ಇಲಾಖೆಗಳಿಗೆ ಕೆರೆಗಳ ನೀರಿನ ಜಲಮಾಲಿನ್ಯವನ್ನು ತಡೆಗಟ್ಟಲು ವರದಿಯನ್ನು ಸಲ್ಲಿಸಲಾಗುತ್ತಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ರ ಕಲಂ 18(ಬಿ) ರಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ನೀಡಿದ ನಿರ್ದೇಶನದ ನಂತರ ಮಂಡಳಿಯು ದಿನಾಂಕ: 28.10.2015 ರಂದು ಬಿಬಿಎಂಪಿ/ಬಿಡಿಎ/ಬಿಡಬ್ಲೂಎಸ್‌ಎಸ್‌ಬಿ/ಎಲ್‌ಡಿಎ ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಇವರಿಂದ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ನೀಡಿದ ನಿರ್ದೇಶನಗಳಿಗೆ ಈ ಕೆಳಕಂಡ ಅನುಪಾಲನಾ ವರದಿ ನೀಡುವಂತೆ ಕೋರಲಾಯಿತು.

1. ಬಿಬಿಎಂಪಿ ಮತ್ತು ಬಿಡಬ್ಲೂಎಸ್‌ಎಸ್‌ಬಿ ಗಳನ್ನು ಸಾಕಷ್ಟು ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ಮತ್ತು ಕೆರೆಗಳ ಜಲಾನಯನ ಪ್ರದೇಶವನ್ನು ಸಂಪೂರ್ಣವಾಗಿ ಒಳಗೊಳ್ಳುವಂತೆ ಹಾಲಿ ಬಿಟ್ಟಿರುವ ಜಾಗಗಳಲ್ಲಿ ಒಳ ಚರಂಡಿ ವ್ಯವಸ್ಥಾಪನೆಯನ್ನು ಅಳವಡಿಸತಕ್ಕದ್ದು.
2. ಬಿಬಿಎಂಪಿ/ಬಿಡಬ್ಲೂಎಸ್‌ಎಸ್‌ಬಿ ಸಂಸ್ಕರಿಸಿದ ಗೃಹ ತ್ಯಾಜ್ಯ ನೀರನ್ನು ಕೈಗಾರಿಕೆಬಳಕೆಗೆ/ರೈಲ್ವೆ/ಬಸ್‌ಗಳನ್ನು ಸ್ವಚ್ಛಗೊಳಿಸಲು /ಉದ್ಯಾನವನ/ ತೋಟಗಾರಿಕಾ ಉದ್ದೇಶಕ್ಕಾಗಿ, ನೀರಾವರಿ ಹಾಗೂ ಟಾಯ್ಲೆಟ್ ಫ್ಲಶಿಂಗ್‌ಗಾಗಿ ಬಳಸುವುದರಿಂದ ಕೆರೆಗಳನ್ನು ಸೇರದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
3. ಬಿ.ಬಿ.ಎಂ.ಪಿ ಮೇಲೆ ನಿರ್ದೇಶಿಸಲಾದ ಕ್ರಮಗಳನ್ನು ಅನುಷ್ಠಾನಗೊಳಿಸಲು ಕಾಲಮಿತಿಯೊಳಗೊಂಡ ಕ್ರಿಯಾ ಯೋಜನೆ ತಯಾರಿಸತಕ್ಕದ್ದು ಮತ್ತು ಅನುಷ್ಠಾನವನ್ನು ನಿಯತವಾಗಿ ಮೇಲ್ವಿಚಾರಣೆ ಮಾಡುವುದು.
4. ಸಂಬಂಧಪಟ್ಟ ಅಧಿಕಾರಿಗಳು ಕೆರೆಗಳ ಸುತ್ತಲೂ ಏರಿ ನಿರ್ಮಿಸತಕ್ಕದ್ದು.
5. ಬಿಡಿಎ/ಬಿಬಿಎಂಪಿ/ಎಲ್‌ಡಿಎ/ಬಿಡಬ್ಲೂಎಸ್‌ಎಸ್‌ಬಿ ಗಳನ್ನು ಅಲ್ಪಾವಧಿ ಕ್ರಮವಾಗಿ ಕೆರೆಗಳಲ್ಲಿ ವಾಯು ಪೂರಕಗಳನ್ನು/ಆಕ್ಸಿಜನೀಕರಣ ಮಾಡಲು ಇಂತಹ ಸೂಕ್ತ ಸಾಧನಗಳನ್ನು ಅಳವಡಿಸುವ ಸಾಧ್ಯತೆಯನ್ನು ಅನ್ವೇಷಿಸತಕ್ಕದ್ದು.

ನಿಯಂತ್ರಣ ಉಪಕರಣ ಹಾಗೂ ನಿರ್ದಿಷ್ಟ ಎತ್ತರದ ಚಿಮಣಿ (Chimney) ಅಳವಡಿಸಲು ಹಾಗೂ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಸುಸ್ಥಿತಿಯಲ್ಲಿಡಲು ನಿಬಂಧನೆಗಳನ್ನು ವಿಧಿಸಲಾಗುತ್ತಿದೆ. ಅವುಗಳ ಕಾರ್ಯಕ್ಷಮತೆಯನ್ನು ಪರಿವೀಕ್ಷಣೆ ಹಾಗೂ ಪಾಲನಾ ಕಾರ್ಯದ ಮೂಲಕ ಪರಿಶೀಲಿಸಿ ಮಂಡಳಿ ವತಿಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

- ಘನತ್ಯಾಜ್ಯ ಸುಡುವುದರಿಂದಾಗುವ ವಾಯು ಮಾಲಿನ್ಯವನ್ನು ತಡೆಯುವ ದೃಷ್ಟಿಯಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 06 ಇಎನ್‌ವಿ 2017, ದಿನಾಂಕ:03.08.2017ರಲ್ಲಿ ರಾಜ್ಯ ಸರ್ಕಾರವು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981 ರ ಕಲಂ 19(5)ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯನ್ನು ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ರಾಜ್ಯಾದ್ಯಂತ ಇರುವ ಘನತ್ಯಾಜ್ಯ ಭೂಭರ್ತಿ ಘಟಕಗಳಲ್ಲಿನ ತೆರೆದ ಜಾಗದಲ್ಲಿ ಮರಗಿಡಗಳ ರೆಂಬೆ ಮತ್ತು ಎಲೆಗಳೂ ಸೇರಿದಂತೆ ಯಾವುದೇ ರೀತಿಯ ಘನತ್ಯಾಜ್ಯಗಳನ್ನು ಸುಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

- ಸರ್ಕಾರವು ನಿರ್ಮಾಣ ಮತ್ತು ಕಟ್ಟಡ ಉರುಳಿಸುವ ಘನತ್ಯಾಜ್ಯ ನಿಯಮ 2016 ನ್ನು (Construction & Demolision Waste Rules-2016) ಕಡ್ಡಾಯವಾಗಿ ಪಾಲಿಸಲು ಮಹಾನಗರ ಪಾಲಿಕೆ , ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿ.ಎಂ.ಆರ್.ಸಿ.ಎಲ್, ಕೆ.ಆರ್.ಡಿ.ಎಲ್, ಸಿ.ಪಿ.ಡಬ್ಲ್ಯೂ.ಡಿ, ಪಿ.ಡಬ್ಲ್ಯೂ.ಡಿ, ಇಲಾಖೆಗಳಿಗೆ ಜಾರಿಗೊಳಿಸಲು ನಿರ್ದೇಶನ ನೀಡಲಾಗಿದೆ. ಮಂಡಳಿ ಮೆ॥ ರಾಕ್ ಕ್ರಿಸ್ಟಲ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಕಟ್ಟಡ ತ್ಯಾಜ್ಯ ಸಂಸ್ಕರಿಸುವ ಘಟಕವನ್ನು ನಡೆಸಲು ಅನುಮತಿಯನ್ನು ನೀಡಲಾಗಿದೆ. ಕಟ್ಟಡಗಳ ನಿರ್ಮಾಣ ಮತ್ತು ಕಟ್ಟಡ ಉರುಳಿಸುವ ಸಮಯದಲ್ಲಿ ಉಂಟಾಗುವ ಘನತ್ಯಾಜ್ಯಗಳನ್ನು (Construction & Demolition Waste) ವಾಹನಗಳಲ್ಲಿ ಸಾಗಿಸುವ ಸಮಯದಲ್ಲಿ ಅವುಗಳನ್ನು ಸೂಕ್ತ ರೀತಿಯಲ್ಲಿ ಮುಚ್ಚಿಕೊಂಡು ಸಾಗಿಸುವಂತೆ ಹಾಗೂ ಅವುಗಳಿಗೆ ನೀರಿನ ಸಿಂಪರಣೆ ಮಾಡಿ ಯಾವುದೇ ರೀತಿಯಲ್ಲಿ ವಾಯು ಮಾಲಿನ್ಯ ಆಗದಂತೆ ಕ್ರಮ ಕೈಗೊಳ್ಳಲು ಸಾರ್ವಜನಿಕರಿಗೂ ಸೇರಿದಂತೆ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿ.ಎಂ.ಆರ್.ಸಿ.ಎಲ್, ಕೆ.ಆರ್.ಡಿ.ಎಲ್, ಸಿ.ಪಿ.ಡಬ್ಲ್ಯೂ.ಡಿ, ಪಿ.ಡಬ್ಲ್ಯೂ.ಡಿ, ಇಲಾಖೆಗಳಿಗೆ ನಿರ್ದೇಶನ ನೀಡಲಾಗಿದೆ.

- ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 168 ಇಪಿಸಿ 2017, ದಿನಾಂಕ:11.08.2017ರಲ್ಲಿ ರಾಜ್ಯ ಸರ್ಕಾರವು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ, 1981ರ ಕಲಂ 19(3)ರ ಅನುಸಾರ ರಾಜ್ಯಾದ್ಯಂತ ವಾಯುಮಾಲಿನ್ಯ ನಿಯಂತ್ರಣಕ್ಕೊಳಪಟ್ಟಿರುವ ಪ್ರದೇಶದಲ್ಲಿನ ಸಿಮೆಂಟ್ ಆವಿಗೆ (kiln) ಮತ್ತು ಸಿಮೆಂಟ್ ಉತ್ಪಾದನಾ ಘಟಕಗಳಿಗೆ ಹೊಂದಿಕೊಂಡಿರುವ ಸುಣ್ಣದಕಲ್ಲನ್ನು ಬಳಸಿ ಗಂಧಕದ ಡೈಆಕ್ಸೈಡ್ (SO_2) ಹೊರಸೂಸುವಿಕೆಯನ್ನು ನಿಯಂತ್ರಿಸಬಲ್ಲ ಘಟಕಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕೈಗಾರಿಕೆಗಳಲ್ಲಿ ಪೆಟ್ ಕೋಕ್ ಅನ್ನು ಇಂಧನವಾಗಿ ಬಳಸುವುದನ್ನು ನಿಷೇಧಿಸಲಾಗಿದೆ.

- ಕೈಗಾರಿಕೆಗಳ ಚಟುವಟಿಕೆಗಳ ಅನುಸಾರವಾಗಿ ವಾಯುಮಾಲಿನ್ಯ ತಡೆಗಟ್ಟುವ ಬಗ್ಗೆ ಹೆಚ್ಚು ಮಾಹಿತಿ ನೀಡಲು ಕಾರ್ಯಾಗಾರ ಮತ್ತು ಸಭೆಗಳನ್ನು ಮಂಡಳಿಯ ಕಚೇರಿಗಳಲ್ಲಿ, ಕಾರ್ಖಾನೆಗಳಲ್ಲಿ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳಲ್ಲಿ ನಿಯಮಿತವಾಗಿ ಹಮ್ಮಿಕೊಳ್ಳಲಾಗುತ್ತಿದೆ. ಮಂಡಳಿಯ ಅಂತರ್ಜಾಲ ಹಾಗೂ ಪತ್ರಿಕೆ ಪ್ರಕಟಣೆಗಳ ಮುಖಾಂತರ ವಾಯು ಮಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ತಿಳುವಳಿಕೆ ನೀಡಲಾಗುತ್ತಿದೆ.

- ಕೇಂದ್ರ ಸರ್ಕಾರದ ನಿಯಮದನ್ವಯ ಏಪ್ರಿಲ್ 2020 ರಿಂದ ಭಾರತ್ ಸ್ಟೇಜ್ VI ಎಂಜಿನ್‌ಗಳನ್ನು ಹೊಂದಿರುವ ಕಡಿಮೆ ಹೊಗೆ ಸೂಸುವ ವಾಹನಗಳನ್ನೇ ಉಪಯೋಗಿಸುವ ನಿಟ್ಟಿನಲ್ಲಿ ಬಿ.ಎಂ.ಟಿ.ಸಿ. ಮತ್ತು ಕೆ.ಎಸ್.ಆರ್.ಟಿ.ಸಿ. ಸಂಸ್ಥೆಗಳು ಕ್ರಮ ಕೈಗೊಳ್ಳುತ್ತಿವೆ.

- ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ115(7)ರ ಪ್ರಕಾರ ಯಾವುದೇ ವಾಹನವು ನೋಂದಣಿಯಾದ ಒಂದು ವರ್ಷದ ತರುವಾಯ ಭಾರತ ಸ್ಟೇಜ್-4 ವಾಹನಗಳಿಗೆ ಒಂದು ವರ್ಷಕ್ಕೊಮ್ಮೆ ಮತ್ತು ಭಾರತ ಸ್ಟೇಜ್-3 ಮಾಪನದ ವಾಹನಗಳಿಗೆ ಆರು ತಿಂಗಳಿಗೊಮ್ಮೆ ಕಡ್ಡಾಯವಾಗಿ ವಾಯುಮಾಲಿನ್ಯ ಹತೋಟಿಯಲ್ಲಿದೆ ಎಂಬ ಪ್ರಮಾಣ ಪತ್ರವನ್ನು ಹೊಂದಿರಬೇಕಾಗುತ್ತದೆ. ಅಂತಹ ಪ್ರಪತ್ರ ಹೊಂದದೇ ಸಂಚರಿಸುತ್ತಿರುವ ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ ಸಾರಿಗೆ ಇಲಾಖೆಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

- ವಾಯುಮಾಲಿನ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಹೆಚ್ಚು ಹೊಗೆ ಹೊರಸೂಸುವ ಹಳೆಯ ವಾಹನಗಳು ಸೇರಿದಂತೆ ಎಲ್ಲಾ ವರ್ಗದ ವಾಹನಗಳ ತಪಾಸಣೆಯನ್ನು ನಿರಂತರವಾಗಿ ನಡೆಸಲಾಗುತ್ತಿದ್ದು, ತಪಾಸಣೆ ವೇಳೆ ವಾಹನವು ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 115(7)ರ ಪ್ರಕಾರ ಕಡ್ಡಾಯವಾಗಿ ಮಾಲಿನ್ಯ ನಿಯಂತ್ರಣ ಪ್ರಪತ್ರ ಹೊಂದಲಾಗಿರುವ ಬಗ್ಗೆ ಪರಿಶೀಲಿಸಿ, ತಪ್ಪಿತಸ್ಥ ಪ್ರಕರಣಗಳಲ್ಲಿ ಮೋಟಾರು ವಾಹನ ಕಾಯ್ದೆ 1988ರ ಕಲಂ 200 ಅಡಿ ಯಾವುದೇ ವರ್ಗದ ವಾಹನಗಳಿಗೆ ಮೊದಲ ಅಪರಾಧಕ್ಕೆ ರೂ. 1000/- ಗಳಿಗೆ ಮೀರದಂತೆ ಮತ್ತು ಎರಡನೇ ಹಾಗೂ ಅನಂತರದ ಅಪರಾಧಕ್ಕೆ ರೂ. 2000/- ಗಳಿಗೆ ಮೀರದಂತೆ ನಿಯಮಾನುಸಾರ ದಂಡವನ್ನು ಸಾರಿಗೆ ಇಲಾಖೆಯಿಂದ ವಿಧಿಸಲಾಗುತ್ತಿದೆ.

- ಕರ್ನಾಟಕ ರಾಜ್ಯದಾದ್ಯಂತ ದಿನಾಂಕ: 01-04-2018 ರಿಂದ 31-10-2018 ರವರೆಗಿನ ಅವಧಿಯಲ್ಲಿ ಒಟ್ಟು 10,35,456 ವಾಹನಗಳನ್ನು ತಪಾಸಣೆ ಮಾಡಿ, ವಾಯುಮಾಲಿನ್ಯ ಉಂಟುಮಾಡುತ್ತಿದ್ದ 61,086 ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ ಒಟ್ಟು ರೂ. 1,96,33,320/- ಗಳಷ್ಟು ದಂಡವನ್ನು ವಸೂಲಿ ಮಾಡಲಾಗಿದೆ.

- ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಭಾರತ ಸರ್ಕಾರವು 1997 ರಲ್ಲಿ ಹಸಿರು ಇಂಧನ ನೀತಿ (Green Fuel Policy) ಜಾರಿಗೊಳಿಸಿತು. ಇದರಿಂದ ಇಂಧನದಲ್ಲಿ ಸೀಸ ಮುಕ್ತಗೊಳಿಸಿ 0.25 % ರಷ್ಟಿದ್ದ ಗಂಧಕದ ಪ್ರಮಾಣವನ್ನು ಹಂತಹಂತವಾಗಿ ಕಡಿಮೆಗೊಳಿಸಿ 2010 ರಿಂದ 0.005 % ಇಳಿಸಲಾಗಿದೆ.

ವಾಯು ಮಾಲಿನ್ಯವನ್ನು ತಡೆಯಲು ತೆಗೆದುಕೊಂಡ ಇತರ ಕ್ರಮಗಳು:

ಹೆಚ್ಚುತ್ತಿರುವ ಧೂಳಿನ ಕಣಗಳು ಮತ್ತು ವಾಯು ಮಾಲಿನ್ಯಕ್ಕೆ ಕಾರಣವಾದಂತಹ ಇತರೆ ಅಂಶಗಳನ್ನು ತಡೆಯುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:

- ಪರಿಸರ (ಸಂರಕ್ಷಣಾ) ಕಾಯ್ದೆ, 1986 ರಲ್ಲಿ ನಿಗಧಿಪಡಿಸಿರುವಂತೆ ವಾಯು ಮಾನಕಗಳು ನಿಗಧಿ ಪಡಿಸಿದ ಪರಿಮಿತಿಯೊಳಗಿರುವಂತೆ ಕಾರ್ಖಾನೆಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ನೀಡುವ ಸಮ್ಮತಿ ಪತ್ರದಲ್ಲಿ ನಿಬಂಧನೆ ಹಾಕಲಾಗುತ್ತಿದೆ ಹಾಗೂ ಆಗಿಂದಾಗ್ಗೆ ವಾಯು ಮಾಲಿನ್ಯ ಮಾಡುವಂತಹ ಕಾರ್ಖಾನೆಗಳನ್ನು ಪರಿವೀಕ್ಷಣೆಗೊಳಪಡಿಸಲಾಗುತ್ತಿದೆ.

- ರಾಸಾಯನಿಕ ಹಾಗೂ ಇನ್ನಿತರ ಅಧಿಕ ಮಾಲಿನ್ಯ ಉಂಟುಮಾಡುವ ಕೈಗಾರಿಕೆಗಳಿಗೆ ನಿರಂತರ ವಾಯು ಮಲಿನಕಾರಕಗಳ ಮಾಪನ ಉಪಕರಣಗಳನ್ನು ಅಳವಡಿಸಿ ಮಾಪನ ವರದಿಯನ್ನು ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಂತರ್ಜಾಲಗಳಿಗೆ ಸಂಪರ್ಕ ಕಲ್ಪಿಸಲಾಗಿದೆ ಹಾಗೂ ನಿಗದಿಪಡಿಸಿದ ವಾಯು ಮಲಿನಕಾರಕಗಳ ಮಾನಕಗಳ ಮಿತಿ ಮೀರಿದ್ದಲ್ಲಿ ಸಂಬಂಧಪಟ್ಟ ಕೈಗಾರಿಕೆಗಳ ವಿರುದ್ಧ ಮಂಡಳಿಯಿಂದ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಕೈಗಾರಿಕೆಗಳು ಸಮರ್ಪಕವಾದ ವಾಯುಮಾಲಿನ್ಯ

10. ವಾಹನ ದಟ್ಟಣೆಯನ್ನು ನಿಯಂತ್ರಿಸಲು ಸಮಗ್ರ ಅಧ್ಯಯನ ಮಾಡಿ ಕಾರ್ಯಯೋಜನೆ ರೂಪಿಸುವುದು.
11. ಮೀಸಲಾದ ಬಸ್ ಲೇನ್‌ಗಳ ವ್ಯವಸ್ಥೆ ಕಲ್ಪಿಸುವುದು.
12. ವಸತಿ ವಲಯ, ವಾಣಿಜ್ಯ ವಲಯ ಮತ್ತು ಸೂಕ್ಷ್ಮ ವಲಯಗಳ ಗಡಿ ನಿರ್ಮಿಸುವುದು ಹಾಗೂ ವಸತಿ ವಲಯವನ್ನು ವಾಣಿಜ್ಯ ವಲಯವನ್ನಾಗಿ ಪರಿವರ್ತಿಸಲು ನಿರ್ಬಂಧ ಹೇರುವುದು.
13. ನಗರದ ಒಳಗೆ-ಹೊರಗೆ ಖಾಲಿ ಇರುವ ಜಾಗಗಳಲ್ಲಿ (ರಸ್ತೆ ಬದಿಗಳಲ್ಲಿ, ಸಾರ್ವಜನಿಕ ಉದ್ಯಾನವನಗಳಲ್ಲಿ, ಕೈಗಾರಿಕಾ ವಲಯಗಳಲ್ಲಿ ಹಾಗೂ ಇತ್ಯಾದಿ) ಗಿಡ ಮರಗಳನ್ನು ನೆಟ್ಟು ನಗರದ ಹಸಿರು ಪರದೆ(Green Cover) ಪ್ರಮಾಣ ಹೆಚ್ಚಿಸುವುದು.

ಮಂಡಳಿಯ ಅಧ್ಯಕ್ಷರು ಸದರಿ ನಿರ್ದೇಶನಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ಸಂಬಂಧಿಸಿದ ಇತರೆ ಇಲಾಖೆಗಳ ಮುಖ್ಯಸ್ಥರೊಂದಿಗೆ ಸಮನ್ವಯ ಸಭೆಗಳ ಮುಖೇನ ನಡೆಸುತ್ತಿರುತ್ತಾರೆ.

- ದಿನಾಂಕ: 8.10.2018 ರಂದು, ಮಾನ್ಯ ಹಸಿರು ನ್ಯಾಯ ಮಂಡಳಿ, ನವದೆಹಲಿ, ನಾನ್ ಅಟೇನ್ಮೆಂಟ್ ನಗರಗಳ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಸಮಗ್ರ ಕ್ರಿಯಾ ಯೋಜನೆಯನ್ನು ರೂಪಿಸಲು ರಾಜ್ಯದಲ್ಲಿ ಈ 6 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲು ಆದೇಶವನ್ನು ಹೊರಡಿಸಿದೆ. ಸದರಿ ನಿರ್ದೇಶನದಂತೆ ರಾಜ್ಯ ಸರ್ಕಾರ ನವೆಂಬರ್ 24, 2018 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಜೀವಿಪರಿಸ್ಥಿತಿ ಮತ್ತು ಪರಿಸರ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ 6 ಸದಸ್ಯರನ್ನೊಳಗೊಂಡ "ವಾಯು ಗುಣಮಟ್ಟ ಮಾಪನ ಸಮಿತಿ" ಯನ್ನು ರಚಿಸಿದೆ. ಸದರಿ ಸಮಿತಿಯು ದಿನಾಂಕ:3.12.2018 ರಂದು ಸಭೆ ನಡೆಸಿ, 48 ಅಂಶಗಳ ಕರಡು ಕ್ರಿಯಾ ಯೋಜನೆಗಳನ್ನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ, ಈ ಯೋಜನೆಗಳ ಬಗ್ಗೆ ಅಭಿಪ್ರಾಯವನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆ.

- ವಾಹನಗಳ ಹೊಗೆ ತಪಾಸಣಾ ಜವಾಬ್ದಾರಿ ಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿದೆ. ಆದರೂ, ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯವು, ಸಾರಿಗೆ ವಲಯದಿಂದ ಶೇ.42 ಉಂಟಾಗುತ್ತಿರುವುದನ್ನು ತಿಳಿದು ಮಂಡಳಿಯು ಡೀಸಲ್ ಮತ್ತು ಪೆಟ್ರೋಲ್ ವಾಹನಗಳು ಹೊರಸೂಸುವ ಹೊಗೆಯನ್ನು ಮಾಪನ ಮಾಡಲು ಸುಸಜ್ಜಿತ ಉಪಕರಣಗಳನ್ನೊಳಗೊಂಡ 12 ಹೊಗೆ ಮಾಪನ ಮಾಡುವ ಸಂಚಾರಿ ವಾಹನಗಳನ್ನು ಖರೀದಿಸಿದ್ದು, ಈ 12 ವಾಹನಗಳ ಪೈಕಿ 6 ವಾಹನಗಳು ಬೆಂಗಳೂರು ನಗರಕ್ಕೆ ಹಾಗೂ ಮೈಸೂರು, ಮಂಗಳೂರು, ಧಾರವಾಡ, ಕಲಬುರ್ಗಿ, ಚಿತ್ರದುರ್ಗ ಮತ್ತು ಬಳ್ಳಾರಿ ನಗರಗಳಿಗೆ ತಲಾ ಒಂದು ವಾಹನ ಹಂಚಿಕೆ ಮಾಡಿದೆ. ಈ ವಾಹನಗಳು ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಬಿ.ಎಂ.ಟಿ.ಸಿ ಮತ್ತು ಕೆ.ಎಸ್.ಆರ್.ಟಿ.ಸಿ ಸಂಸ್ಥೆಗಳ ಸಹಾಯದೊಂದಿಗೆ ಜಂಟಿ ಕಾರ್ಯಚರಣೆ ನಡೆಸಲಾಗಿದ್ದು, ಆಗಸ್ಟ್ 2018 ರವರೆಗಿನ ವಾಹನಗಳ ಹೊಗೆಯ ಮಾಪನ ವಿವರಗಳು ಈ ಕೆಳಗಿನಂತಿದೆ.

ಪರೀಕ್ಷಿಸಿದ ವಾಹನ ಸಂಖ್ಯೆ		ಉತ್ತೀರ್ಣ	ಅನುತ್ತೀರ್ಣ
ಪೆಟ್ರೋಲ್ ವಾಹನಗಳು	20099	17472 (86.9 %)	2627 (13.1 %)
ಡೀಸಲ್ ವಾಹನಗಳು	12627	9561 (75.7 %)	3066(24.3 %)

- ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ W.P.No.13029 / 1985 (Civil-PIL) ನಿರ್ದೇಶನದಂತೆ, ಸರ್ಕಾರದ ಆದೇಶ ಸಂಖ್ಯೆ: ಅಪಜೀ/183/ಇಎನ್‌ವಿ/ 2001. ದಿನಾಂಕ:10.09.2001 ರಲ್ಲಿ ಪ್ರಥಮವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ (Task Force) ಯನ್ನು ರಚಿಸಿದೆ. ಪ್ರಸ್ತುತ ಸದರಿ ಕಾರ್ಯಪಡೆಯ ಅಧ್ಯಕ್ಷತೆಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ವಹಿಸಿರುತ್ತಾರೆ.
- ಈ ಕಾರ್ಯಪಡೆಯು 2003 ರಲ್ಲಿ 14 ಅಂಶಗಳ ಕ್ರಿಯಾ ಯೋಜನೆಗಳನ್ನು **(ಅನುಬಂಧ-4)** ರೂಪಿಸಿದ್ದು, ಪ್ರಸ್ತುತ ಅವುಗಳನ್ನು ಬಹುತೇಕ ಜಾರಿಗೊಳಿಸಲಾಗಿದೆಯೆಂದು ತಿಳಿದು. ದಿನಾಂಕ:12.12.2017 ರಂದು ನಡೆದ 22ನೇ ಕಾರ್ಯಪಡೆಯ ಸಭೆಯಲ್ಲಿ, ಪ್ರಸ್ತುತ ಸ್ಥಿತಿ ಹಾಗೂ ಭವಿಷ್ಯದ ನಗರಾಭಿವೃದ್ಧಿಯನ್ನು ಗಮನದಲ್ಲಿಟ್ಟು ಹೊಸ ಕ್ರಿಯಾ ಯೋಜನೆಗಳ ಅವಶ್ಯಕತೆಯಿದೆಯೆಂದು ತಿಳಿದು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಹೊಸ ಕ್ರಿಯಾ ಯೋಜನೆಗಳನ್ನು ರೂಪಿಸಲು ತೀರ್ಮಾನಿಸಲಾಯಿತು. ಅದರಂತೆ, 48 ಹೊಸ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ**(ಅನುಬಂಧ-5)**, ದಿನಾಂಕ: 19-01-2018 ರಂದು ನಡೆದ ಸಮನ್ವಯ ಸಮಿತಿ ಸಭೆಯಲ್ಲಿ ಮಂಡಿಸಿ ಸಂಬಂಧ ಪಟ್ಟ ಇಲಾಖೆಗಳ ಸಲಹೆ/ ತಿದ್ದುಪಡಿಯನ್ನು ಪಡೆದು, ದಿನಾಂಕ:7.6.2018ರಲ್ಲಿ ನಡೆದ 23ನೇ ಕಾರ್ಯಪಡೆಯ ನಡವಳಿಯಂತೆ, ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ, ಸರ್ಕಾರದ ಆದೇಶ ಹೊರಡಿಸಲು ಮಂಡಳಿಯಿಂದ ದಿನಾಂಕ:14.06.2018 ರಂದು ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಸಂಬಂಧ ಪಟ್ಟ ಇಲಾಖೆಗಳಿಂದ ಅಭಿಪ್ರಾಯ/ ಸಲಹೆಗಳನ್ನು ನಿರೀಕ್ಷಿಸಲಾಗುತ್ತಿದೆ.
- ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 39423/2013, Suo Moto V/s State of Karnataka ರಲ್ಲಿ ನೀಡಿರುವ ನಿರ್ದೇಶನದಂತೆ, -ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಇಲಾಖೆಗಳನ್ನೊಳಗೊಂಡ ಸಮನ್ವಯ ಸಮಿತಿಯನ್ನು ದಿನಾಂಕ:2.4.2014 ರಂದು ರಚಿಸಲಾಗಿದೆ. ಇದುವರೆಗೂ ಒಟ್ಟು 19 ಸಭೆಗಳು ನಡೆದಿದ್ದು, ವಾಯುಮಾಲಿನ್ಯ ನಿಯಂತ್ರಣದ ನಿಟ್ಟಿನಲ್ಲಿ ಸಮಿತಿಯು ಕಾರ್ಯನಿರ್ವಹಿಸುತ್ತಿದೆ. ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ, ಮಂಡಳಿಯು ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ನಿಯಂತ್ರಿಸಲು ಸಾರಿಗೆ ಇಲಾಖೆ, ಬಿ.ಬಿ.ಎಂ.ಪಿ ಹಾಗೂ ಪೋಲಿಸ್ ಇಲಾಖೆಗಳಿಗೆ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರ ಸೆಕ್ಷನ್ 31(ಎ) ಅಡಿಯಲ್ಲಿ ಈ ಕೆಳಕಂಡ ಅಲ್ಪಾವಧಿ ಮತ್ತು ದೀರ್ಘಾವಧಿ ಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ದಿನಾಂಕ:28.3.2014 ರಂದು ನಿರ್ದೇಶಿಸಿದೆ.

1. ಭಾರಿ ವಾಹನಗಳು ನಗರದ ಒಳಗಡೆ ಬಾರದಂತೆ ನಿರ್ಬಂಧಿಸುವುದು.
2. ನಗರದ ಒಳಗಡೆ 2 ಸ್ಟ್ರೋಕ್ ದ್ವಿಚಕ್ರ ವಾಹನಗಳ ಬಳಕೆ ನಿಷೇಧಿಸುವುದು.
3. 15 ವರ್ಷಗಳ ಹಳೆಯ ವಾಹನಗಳ ಬಳಕೆಗೆ ನಿರ್ಬಂಧ ಹೇರಿರುವುದನ್ನು ಅನುಷ್ಠಾನಗೊಳಿಸುವುದು.
4. ಬೆಂಗಳೂರು ಕೇಂದ್ರ ವ್ಯಾಪಾರ ಜಿಲ್ಲೆಯ ಒಳಗಡೆ ಆಟೋರಿಕ್ಷಾ ಸಂಚಾರ ನಿರ್ಬಂಧಿಸುವುದು.
5. ಬಿ.ಬಿ.ಎಂ.ಪಿಯು ರಸ್ತೆ ಮತ್ತು ರಸ್ತೆ ಬದಿಯಲ್ಲಿ ಇರುವ ಧೂಳು, ಸಿಲ್ಟ್‌ನ್ನು ಯಾಂತ್ರಿಕವಾಗಿ ಪ್ರತಿದಿನ ಕಡ್ಡಾಯವಾಗಿ ಸ್ವಚ್ಛಗೊಳಿಸುವುದು.
6. ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿ ರಸ್ತೆಗಳನ್ನು ವ್ಯವಸ್ಥಿತವಾಗಿ ಇಡುವುದು.
7. ಪಾದಚಾರಿ ರಸ್ತೆಗಳ ಅತಿಕ್ರಮಣವನ್ನು ತೆರವುಗೊಳಿಸುವುದು.
8. ಬಹುಮಹಡಿ ವಾಹನಗಳ ನಿಲುಗಡೆ ವ್ಯವಸ್ಥೆ ಕಲ್ಪಿಸುವುದು.
9. ವಾಹನಗಳ ದಟ್ಟಣೆ ಹೆಚ್ಚಿಸುವಂತಹ ಸಭೆ ಸಮಾರಂಭಗಳನ್ನು ಪೋಲೀಸ್ ಇಲಾಖೆ ಪರಿಶೀಲಿಸಿ ಅನುಮತಿ ನೀಡುವುದು.

ಅನುಬಂಧ–1

ಪರಿಸರ ಮಾಲಿನ್ಯವನ್ನು ತಡೆಗಟ್ಟಲು ರಾಜ್ಯ ಸರ್ಕಾರದಿಂದ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- ವಾಯು ಮಾಲಿನ್ಯ :

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾಯೋಜಿತ ರಾಷ್ಟ್ರೀಯ ವಾಯು ಗುಣಮಟ್ಟ ಪರಿಶೀಲನಾ ಕಾರ್ಯಕ್ರಮದ (NAMP) ಅಡಿಯಲ್ಲಿ ಬೆಂಗಳೂರು ನಗರವಲ್ಲದೇ ರಾಜ್ಯದ ಪ್ರಮುಖ ನಗರಗಳ ವಾಯು ಗುಣಮಟ್ಟವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾಪನ ಮಾಡಲಾಗುತ್ತಿದೆ.

ಬೆಂಗಳೂರು ನಗರದ ವಾಯು ಗುಣಮಟ್ಟವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಯಂತೆ 21 ಕೇಂದ್ರಗಳಲ್ಲಿ ಮಾಪನ ಮಾಡಲಾಗುತ್ತಿದೆ. 21 ಕೇಂದ್ರಗಳ ಪೈಕಿ 7 ನಿರಂತರ ವಾಯು ಮಾಪನ ಕೇಂದ್ರಗಳಲ್ಲಿ ಸತತ ಇಪ್ಪತ್ನಾಲ್ಕು ಗಂಟೆಗಳ ಕಾಲ ಗಂಧಕದ ಡೈಆಕ್ಸೈಡ್ (SO_2) ಸಾರಜನಕದ ಡೈಆಕ್ಸೈಡ್ (NO_2), ಧೂಳಿನ ಕಣಗಳು, (PM_{10}) ಧೂಳಿನ ಕಣಗಳು, ($PM_{2.5}$) ಇಂಗಾಲದ ಮಾನಾಕ್ಸೈಡ್ (CO), ಓಜೋನ್ (O3), ಅಮೋನಿಯಾ (NH3) ಮತ್ತು ಬೆನ್‌ಜೀನ್ (Benzene) ಸೇರಿದಂತೆ ಎಂಟು ಮಲಿನ ಕಾರಕಗಳನ್ನು ಮಾಪನ ಮಾಡಲಾಗುತ್ತಿದೆ ಹಾಗೂ 14 ಮಾನವ ಚಾಲಿತ ಕೇಂದ್ರಗಳಲ್ಲಿ (Manual Stations) 24 ಗಂಟೆಗಳ ಕಾಲ, ವಾರಕ್ಕೆ 2 ಬಾರಿ, ಗಂಧಕದ ಡೈ ಆಕ್ಸೈಡ್ (SO_2), ಸಾರಜನಕದ ಡೈ ಆಕ್ಸೈಡ್ (NO_2), ಧೂಳಿನ ಕಣಗಳ ಗಾತ್ರ 10 ಮೈಕ್ರಾನ್ ಹಾಗೂ 2.5 ಮೈಕ್ರಾನ್ (PM_{10}), ($PM_{2.5}$), ಅಮೋನಿಯ ಮತ್ತು ಸೀಸ ಮಲಿನಕಾರಕಗಳನ್ನು ವಿಶ್ಲೇಷಿಸಲಾಗುತ್ತಿದೆ.

2017–18 ನೇ ಸಾಲಿನ ಬೆಂಗಳೂರು ನಗರದ ವಾಯುಗುಣಮಟ್ಟದ ವಾರ್ಷಿಕ ಸರಾಸರಿ ವರದಿಯನ್ನು **ಅನುಬಂಧ–2** ರಲ್ಲಿ ಲಗತ್ತಿಸಲಾಗಿದೆ. ಸಂಗ್ರಹಿಸಿದ ದತ್ತಾಂಶವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ದೆಹಲಿಗೆ ವಿದ್ಯುನ್ಮಾನ ಮೂಲಕ ಕಳುಹಿಸಲಾಗುತ್ತಿದೆ ಮತ್ತು ಮಂಡಳಿಯ ಅಂತರ್ಜಾಲದಲ್ಲಿ (ವೆಬ್‌ಸೈಟ್) ಪ್ರಕಟಿಸಲಾಗುತ್ತಿದೆ. ವಾಯು ಮಾಪನದ ದತ್ತಾಂಶವನ್ನು ಸಂಬಂಧಪಟ್ಟ ಇಲಾಖೆಗಳಿಗೆ ವಾಯು ಮಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ಕ್ರಿಯಾಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸೂಚಿಸಿ ನಿಯತಕಾಲಿಕವಾಗಿ ಸಲ್ಲಿಸಲಾಗುತ್ತಿದೆ. ಪ್ರತಿದಿನ ಬೆಂಗಳೂರಿನ ಏಳು ನಿರಂತರ ಪರಿವೇಷ್ಠಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕವನ್ನು (AQI) ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳಿಗೆ ಎಸ್.ಎಂ.ಎಸ್ ಮುಖಾಂತರ ಕಳುಹಿಸಲಾಗುತ್ತಿದೆ.

ಮಂಡಳಿಯು ಬೆಂಗಳೂರು ನಗರವಲ್ಲದೇ ರಾಜ್ಯದ 19 ಪ್ರಮುಖ ನಗರಗಳಲ್ಲಿ ಪರಿವೇಷ್ಠಕ ವಾಯುಗುಣಮಟ್ಟ ಮಾಪನ ಮಾಡುತ್ತಿದೆ. ಮಾಪನದ ವರದಿಯನ್ನು **ಅನುಬಂಧ–3** ರಲ್ಲಿ ಲಗತ್ತಿಸಿದೆ.

ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ದಾವಣಗೆರೆ ಮತ್ತು ಗುಲ್ಬರ್ಗ ನಗರಗಳಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಈ ಕೆಳಗಿನ ಮೂರು ಸಮಿತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.

1. ಕಾರ್ಯಪಡೆ (Task Force Committee)
2. ಸಮನ್ವಯ ಸಮಿತಿ (Co-ordination Committee)
3. ವಾಯು ಗುಣಮಟ್ಟ ಮಾಪನ ಸಮಿತಿ (Air Quality Monitoring Committee)

ಹುಬ್ಬಳ್ಳಿ–ಧಾರವಾಡ, ದಾವಣಗೆರೆ ಮತ್ತು ಗುಲ್ಬರ್ಗ ನಗರಗಳಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯಪಡೆಯನ್ನು ರಚಿಸಿದೆ. ಈ ಸಮಿತಿಯು ನಗರಗಳಲ್ಲಿ ಹೆಚ್ಚುತ್ತಿರುವ ಮಾಲಿನ್ಯವನ್ನು ಕಡಿಮೆ ಮಾಡಲು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.

7) ನಗರದ ರಸ್ತೆಗಳಲ್ಲಿ ಸಂಚಾರ ಸಮಸ್ಯೆಗಳಿಗೆ ಪ್ರಮುಖ ಕಾರಣವಾಗಿರುವ ವಾಹನಗಳ ಅನಧಿಕೃತ ತಪ್ಪು ನಿಲುಗಡೆ ಹಾಗೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ.

8) ನಗರಾದ್ಯಂತ ಸಮಾನ ವೇಗಮಿತಿಯನ್ನು ಜಾರಿಗೊಳಿಸಲಾಗಿದ್ದು, ಅತಿವೇಗವಾಗಿ ಚಲಿಸುವವರ ವಿರುದ್ಧವೂ ಸಹ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲಾಗಿದೆ.

9) ಇದೇ ಈ ರೀತಿ ಅಡ್ಡಾದಡ್ಡಿಯಾಗಿ ವಾಹನ ಚಾಲನೆ ಮಾಡುವವರ ವಿರುದ್ಧ ಅಪಾಯಕಾರಿ ಚಾಲನೆ ಪ್ರಕರಣಗಳನ್ನು ದಾಖಲಿಸುತ್ತಿದೆ.

10) ಸಂಚಾರ ನಿರ್ವಹಣಾ ಕೇಂದ್ರವು (TMC) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರು ನಗರಾದ್ಯಂತ ಅಳವಡಿಸಲಾಗಿರುವ ಕಣ್ಗಾವಲು ಕ್ಯಾಮರಾದ ಮೂಲಕ ಟಿಎಂಸಿಯಲ್ಲಿ ಅಳವಡಿಸಲಾಗಿರುವ ವಿಡಿಯೋ ವಾಲ್‌ನ ಮುಖಾಂತರ ಸಂಚಾರ ದಟ್ಟಣೆಯನ್ನು ನಿರ್ವಹಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ.

11) 10 ಜಂಕ್ಷನ್‌ಗಳಲ್ಲಿ ಆರ್‌ಎಲ್‌ವಿಡಿ (Red Light Violation Detection) ಕ್ಯಾಮರಾಗಳನ್ನು ಅಳವಡಿಸಲಾಗಿದೆ.

12) ನಗರದ ಅತೀ ಹೆಚ್ಚು ವಾಹನ ದಟ್ಟಣೆ ಇರುವ 12 ಕಾರಿಡಾರ್‌ಗಳನ್ನು ಗುರುತಿಸಿದ್ದು, ಇವುಗಳನ್ನು ಶೂನ್ಯ ತಾಳ್ಮೆ ವಲಯಗಳೆಂದು ಘೋಷಿಸಿದ್ದು, ಇಲ್ಲಿ ಯಾವುದೇ ತರಹದ ಸಂಚಾರ ನಿಯಮ ಉಲ್ಲಂಘನೆಯಾಗದಂತೆ ನೋಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

13) ಸಾರ್ವಜನಿಕರನ್ನು ಸಹ ಪರಿಣಾಮಕಾರಿಯಾಗಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸುವ ನಿಟ್ಟಿನಲ್ಲಿ ಬಳಸಿಕೊಳ್ಳಲಾಗಿದೆ.

14) ನಗರದ 50 ಸಂಚಾರ ಪೊಲೀಸ್ ಅಧಿಕಾರಿಗಳನ್ನು ಬಾಡಿ ವೋರ್ನ್ ಕ್ಯಾಮರಾಗಳನ್ನು ವಿತರಿಸಲಾಗಿದ್ದು, ಇದರಿಂದಾಗಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಾಗುತ್ತಿದೆ.

15) ಬೆಂಗಳೂರು ನಗರ ಸಂಚಾರ ವಾರ್ಡನ್ ಸಂಸ್ಥೆ ಇದ್ದು ಸಂಚಾರ ವಾರ್ಡನ್‌ಗಳನ್ನು ಹಾಗೂ ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಸಹ ಸಂಚಾರ ನಿಯಂತ್ರಣಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

		ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ದೊಡ್ಡ ಪ್ರಮಾಣದಲ್ಲಿನ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಪ್ರಕ್ರಿಯೆಗಳಿಗೆ ಎಂಪಾನೆಲ್ಡ್ ವೆಂಡರ್‌ಗಳನ್ನು ಗುರುತಿಸಿ ಪಾಲಿಕೆಯ ವೆಬ್ ಸೈಟ್‌ನಲ್ಲಿ ಪ್ರಚುರಪಡಿಸಲಾಗಿರುತ್ತದೆ. ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು ವೆಂಡರ್‌ಗಳೊಂದಿಗೆ ಒಡಂಬಡಿಕೆ ಕೈಗೊಂಡು, ವಿಲೇವಾರಿ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತುತ ಕ್ರಮವಹಿಸಲಾಗಿರುತ್ತದೆ.
ಇ	ಕೈಗಾರಿಕೆಗಳು ಮತ್ತಿತರ ಹೆಚ್ಚಿನ ಪ್ರಮಾಣದಲ್ಲಿ ಮಾಲಿನ್ಯಕ್ಕೆ ಕಾರಣವಾಗಿರುವ ಮೂಲಗಳನ್ನು ಗಮನದಲ್ಲಿರಿಸಿಕೊಂಡು ಪರಿಸರ ಮಾಲಿನ್ಯ ತಡೆಗೆ ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳೇನು?	• ಪರಿಸರ (ಸಂರಕ್ಷಣಾ) ಕಾಯ್ದೆ, 1986 ರಲ್ಲಿ ನಿಗಧಿಪಡಿಸಿರುವಂತೆ ವಾಯು ಮಾನಕಗಳು ನಿಗದಿಪಡಿಸಿದ ಪರಿಮಿತಿಯೊಳಗಿರುವಂತೆ ಕಾರ್ಖಾನೆಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೀಡುವ ಸಮ್ಮತಿ ಪತ್ರದಲ್ಲಿ ನಿಬಂಧನೆ ಹಾಕಲಾಗುತ್ತಿದೆ ಹಾಗೂ ಆಗಿಂದಾಗ್ಗೆ ವಾಯು ಮಾಲಿನ್ಯ ಮಾಡುವಂತಹ ಕಾರ್ಖಾನೆಗಳನ್ನು ಪರಿವೀಕ್ಷಣೆಗೊಳಪಡಿಸಲಾಗುತ್ತಿದೆ. • ರಾಸಾಯನಿಕ ಹಾಗೂ ಇನ್ನಿತರ ಅಧಿಕ ಮಾಲಿನ್ಯ ಉಂಟುಮಾಡುವ ಕೈಗಾರಿಕೆಗಳಿಗೆ ನಿರಂತರ ವಾಯು ಮಲಿನಕಾರಕಗಳ ಮಾಪನ ಉಪಕರಣಗಳನ್ನು ಅಳವಡಿಸಿ ಮಾಪನ ವರದಿಯನ್ನು ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ . ಅಂತರ್ಜಾಲಗಳಿಗೆ ಸಂಪರ್ಕ ಕಲ್ಪಿಸಲಾಗಿದೆ ಹಾಗೂ ಕೈಗಾರಿಕೆಗಳು ನಿಗಧಿ ಪಡಿಸಿದ ವಾಯು ಮಲಿನಕಾರಕಗಳ ಮಾನಕಗಳ ಮಿತಿ ಮೀರಿದ್ದಲ್ಲಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ. ಕೈಗಾರಿಕೆಗಳು ಸಮರ್ಪಕವಾದ ವಾಯುಮಾಲಿನ್ಯ ನಿಯಂತ್ರಣ ಉಪಕರಣ ಹಾಗೂ ನಿರ್ಧಿಷ್ಟ ಎತ್ತರದ ಚಿಮಣಿ (Chimney) ಅಳವಡಿಸಲು ಹಾಗೂ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಸುಸ್ಥಿತಿಯಲ್ಲಿಡಲು ನಿಬಂಧನೆಗಳನ್ನು ವಿಧಿಸಲಾಗುತ್ತಿದೆ. ಇವುಗಳ ಕಾರ್ಯಕ್ಷಮತೆಯನ್ನು ಪರಿವೀಕ್ಷಣೆ ಹಾಗೂ ಮಾಪನ ಕಾರ್ಯದ ಮೂಲಕ ಪರೀಕ್ಷಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಅಪಜೀ 231 ಇಪಿಸಿ 2018

(ಆರ್. ಶಂಕರ್)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

ಮುಂದುವರೆದು, ಮಹಾನಗರ ಪ್ರದೇಶಗಳಲ್ಲಿ ವಿಶೇಷತ ಅತಿವೇಗದಲ್ಲಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಸಂಚಾರ/ವಾಹನದಟ್ಟಣೆ ನೀಗಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ನಗರ ಸಂಚಾರ ಪೊಲೀಸ್ ವಿಭಾಗದಿಂದ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ:

1) ಸಂಚಾರ ದಟ್ಟಣೆ/ಸಮಸ್ಯೆಗಳು ಕಂಡುಬರುತ್ತಿರುವ ಸ್ಥಳಗಳಲ್ಲಿ ಪರಿವೀಕ್ಷಣೆ ನಡೆಸಿ ಸುಗಮ ಸಂಚಾರದ ಹಿತದೃಷ್ಟಿಯಿಂದ ನಗರದ ಹಲವಾರು ಸ್ಥಳಗಳಲ್ಲಿ ಬಲತಿರುವು ಹಾಗೂ ಯು - ತಿರುವುಗಳನ್ನು ನಿರ್ಬಂಧಿಸಲಾಗಿದೆ.
2) ನಗರದ 107 ಪ್ರಮುಖ ರಸ್ತೆಗಳನ್ನು ಗುರುತಿಸಿ ಝೀರೋ ಟಾಲರೆನ್ಸ್ ರಸ್ತೆಯೆಂಬುದಾಗಿ ಜಾರಿ ಮಾಡಲಾಗಿರುತ್ತದೆ. ಅಂತಹ ರಸ್ತೆಗಳಲ್ಲಿ ಯಾವುದೇ ರೀತಿಯ ಅನಧಿಕೃತ ವಾಹನ ನಿಲುಗಡೆ, ತಪ್ಪು ವಾಹನ ನಿಲುಗಡೆ ಹಾಗೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆಗಳಾಗದಂತೆ ಸಂಚಾರ ಅಧಿಕಾರಿಗಳ ಗಸ್ತುಗಳನ್ನು ಏರ್ಪಡಿಸಲಾಗಿರುತ್ತದೆ.
3) ನಗರದ ರಸ್ತೆಗಳಲ್ಲಿ ಭಾರೀ ಸರಕು ಸಾಗಣೆ ವಾಹನಗಳನ್ನು ಬೆಳಿಗ್ಗೆ 11.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ ಹಾಗೂ ರಾತ್ರಿ 10.00 ಘಂಟೆಯಿಂದ ಬೆಳಿಗ್ಗೆ 7.00 ಘಂಟೆಯವರೆಗೆ ಸಂಚರಿಸುವಂತೆ ನಿರ್ಬಂಧಿಸಲಾಗಿದೆ.
4) ಪೀಕ್ ಅವರ್‌ಗಳಲ್ಲಿ ನಗರದ ಎಲ್ಲಾ ಜಂಕ್ಷನ್ ಮತ್ತು ರಸ್ತೆಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುತ್ತಾರೆ.
5) ಪ್ರತಿಯೊಂದು ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಒಂದೊಂದು ಪ್ರಮುಖ ರಸ್ತೆಗಳನ್ನು ಗುರುತಿಸಿ ಮಾದರಿ ರಸ್ತೆಯನ್ನಾಗಿ ಅಳವಡಿಸಿಕೊಳ್ಳಲಾಗಿದೆ.
6) ಬೆಂಗಳೂರು ನಗರಾದ್ಯಂತ ಅವೈಜ್ಞಾನಿಕ ಹಾಗೂ ಅನಧಿಕೃತವಾಗಿ ನಿರ್ಮಿಸಲಾಗಿದ್ದ ರಸ್ತೆ ಉಬ್ಬುರಗಳನ್ನು ತೆರವುಗೊಳಿಸಲಾಗಿದೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1157
2. ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಎನ್.ಎ. ಹ್ಯಾರಿಸ್
3. ಉತ್ತರಿಸಬೇಕಾದ ದಿನಾಂಕ : 17.12.2018
4. ಉತ್ತರಿಸಬೇಕಾದ ಸಚಿವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹೆಚ್ಚುತ್ತಿರುವ ಪರಿಸರ ಮಾಲಿನ್ಯ ಹಾಗೂ ವಾಯು ಮಾಲಿನ್ಯ ತಡೆಗಟ್ಟುವ ದಿಶೆಯಲ್ಲಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಯಾವುವು;	ಪರಿಸರ ಮಾಲಿನ್ಯವನ್ನು ತಡೆಗಟ್ಟಲು ರಾಜ್ಯ ಸರ್ಕಾರದಿಂದ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕೈಗೊಳ್ಳಲಾದ ಕಾರ್ಯಕ್ರಮಗಳ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಆ)	ಮಹಾನಗರ ಪ್ರದೇಶಗಳಲ್ಲಿ ವಿಶೇಷತ ಅತಿವೇಗದಲ್ಲಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಸಂಚಾರ/ವಾಹನ ದಟ್ಟಣೆ, ಜನದಟ್ಟಣೆ, ದೊಡ್ಡಪ್ರಮಾಣದಲ್ಲಿನ ತ್ಯಾಜ್ಯ ಸಂಗ್ರಹಣೆ/ವಿಲೇವಾರಿ ಸಮಸ್ಯೆ ಇತ್ಯಾದಿಗಳನ್ನು ಸುಲಭ ಸಾಧ್ಯವೆನಿಸುವ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗುವ ನಿಟ್ಟಿನಲ್ಲಿ ಇಲಾಖೆಯು ಕೈಗೊಂಡಿರುವ ಕ್ರಮಗಳು ಹಾಗೂ ಗುರಿ ಮತ್ತು ಸಾಧನೆ ಕುರಿತಾದ ವಿವರಗಳೇನು;	• ಬೆಂಗಳೂರು ನಗರದ ವಾಯು ಮಾಲಿನ್ಯ ಗುಣ ಮಟ್ಟವನ್ನು ಕೇಂದ್ರ ಸರ್ಕಾರದ ಪರಿಸರ ಮಂತ್ರಾಲಯದ ಯೋಜನೆಯಡಿ ಟೆರ್ರಿ (TERI) ಸಂಸ್ಥೆಯು ಅಧ್ಯಯನ 2007ರಲ್ಲಿ ನಡೆಸಿರುತ್ತದೆ. ವರದಿಯ ಪ್ರಕಾರ ಬೆಂಗಳೂರು ನಗರದಲ್ಲಿ ಪ್ರತಿ ದಿನ ಒಟ್ಟು ಉತ್ಪತ್ತಿಯಾಗುವ ಧೂಳಿನ ಕಣಗಳ (10 ಮೈಕ್ರಾನ್‌ಗಿಂತ ಕಡಿಮೆ) ಪ್ರಮಾಣ 54.4 ಟನ್‌ನಷ್ಟು ಇರುತ್ತದೆ. ಇದರಲ್ಲಿ ವಿವಿಧ ವಲಯಗಳ ಪ್ರಮಾಣ ಕೆಳಕಂಡಂತಿದೆ. <table><tr><th>ಕ್ರಮ ಸಂಖ್ಯೆ</th><th>ವಲಯ</th><th>ಶೇಕಡಾವಾರು</th></tr><tr><td>1</td><td>ಸಾರಿಗೆ ವಲಯ</td><td>42.0 %</td></tr><tr><td>2</td><td>ರಸ್ತೆ ಧೂಳು</td><td>20.0 %</td></tr><tr><td>3</td><td>ಕಟ್ಟಡ ನಿರ್ಮಾಣ</td><td>14.0 %</td></tr><tr><td>4</td><td>ಕೈಗಾರಿಕೆ</td><td>14.0 %</td></tr><tr><td>5</td><td>ಜನರೇಟರ್‌ಗಳು</td><td>7.0 %</td></tr><tr><td>6</td><td>ಗೃಹಬಳಕೆ</td><td>3.0 %</td></tr></table> ನಗರಗಳಲ್ಲಿ ಹೆಚ್ಚುತ್ತಿರುವ ಧೂಳಿನ ಕಣಗಳು ಮತ್ತು ವಾಯು ಮಾಲಿನ್ಯಕ್ಕೆ ಕಾರಣವಾದಂತಹ ಇತರೆ ಅಂಶಗಳನ್ನು ತಡೆಯುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿವತಿಯಿಂದ ಕೈಗೊಳ್ಳಲಾದ ಕ್ರಮಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

		(ಕೆ) ಕೌಶಲ್ಯ ವರ್ಧನೆ ಅಥವಾ ವೃತ್ತಿ ತರಬೇತಿ ಕೇಂದ್ರಗಳು; (ಎಲ್) ರಸ್ತೆಗಳು ಮತ್ತು; (ಎಂ) ಸಮುದಾಯ ಕೇಂದ್ರಗಳು; ಪರಂತು, (i) ಈ ಉಪ ಪ್ರಕರಣದಲ್ಲಿ ನಮೂದಿಸಲಾದ ಉದ್ದೇಶಗಳಿಗಾಗಿ ಬಿಟ್ಟುಕೊಡಬೇಕಾದ ಅರಣ್ಯ ಜಮೀನು, ಪ್ರತಿಯೊಂದು ಪ್ರಕರಣದಲ್ಲಿ ಒಂದು ಹೆಕ್ಟೇರ್‌ಗಿಂತ ಕಡಿಮೆಯಿದ್ದರೆ; ಮತ್ತು (ii) ಅಂಥ ಅಭಿವೃದ್ಧಿ ಯೋಜನೆಗಳಿಗೆ ಒಪ್ಪಿಗೆ ಕೊಡುವುದು, ಅದಕ್ಕೆ ಗ್ರಾಮ ಸಭೆಯು ಶಿಫಾರಸ್ಸು ಮಾಡಿರಬೇಕೆಂಬ ಷರತ್ತಿಗೆ ಒಳಪಟ್ಟಿದ್ದರೆ ಮಾತ್ರವೇ ಅರಣ್ಯ ಜಮೀನನ್ನು, ಹಾಗೆ ಬಿಟ್ಟು ಕೊಡುವುದಕ್ಕೆ ಅನುಮತಿಸತಕ್ಕದ್ದು. • ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007 ರ 2) ಪ್ರಕಾರ ಕಲಂ 4 ಉಪ ನಿಯಮ 7 ರಲ್ಲಿ ಅರಣ್ಯ ಹಕ್ಕುಗಳನ್ನು, ಅರಣ್ಯ (ಸಂರಕ್ಷಣಾ) ಅಧಿನಿಯಮ, 1980 ರ (1980 ರ 69) ಅಡಿಯಲ್ಲಿನ ಒಪ್ಪಿಗೆ. ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದಂತಹವುಗಳನ್ನು ಹೊರತುಪಡಿಸಿ, 'ನಿವ್ವಳ ಪ್ರಸ್ತುತ ಮೌಲ್ಯ'ದ ಸಂದಾಯ ಮತ್ತು ಅರಣ್ಯ ಭೂಮಿಯನ್ನು ಬೇರೆ ಉದ್ದೇಶಕ್ಕೆ ಕೊಟ್ಟಿದ್ದರಿಂದ "ಪರಿಹಾರಾತ್ಮಕ ಅರಣ್ಯ ನಿರ್ಮಾಣ"ದ ಅಗತ್ಯತೆಯೂ ಒಳಗೊಂಡಂತೆ ಎಲ್ಲಾ ಪೂರ್ವಾದಿಗಳಿಂದ ಮತ್ತು ಪ್ರಕ್ರಿಯಾ ಅಗತ್ಯತೆಗಳಿಂದ ಮುಕ್ತಗೊಳಿಸಿ ಪ್ರಧಾನ ಮಾಡತಕ್ಕದ್ದು.
		ಮುಂದುವರೆದು, ಅರಣ್ಯ ಭೂಮಿಯನ್ನು ಸರ್ಕಾರಿ ಕೆಲಸಗಳಿಗಾಗಿ ಅಂದರೆ ಶಾಲೆ, ಕುಡಿಯುವ ನೀರು, ವಿದ್ಯುತ್ ಕಂಬ ಅಳವಡಿಕೆ, ಕ್ರೀಡಾ ಮೈದಾನ ಮುಂತಾದ ಅವಶ್ಯವಾದ ವಿವಿಧ ಕಾಮಗಾರಿಗಳಿಗಾಗಿ ಅರಣ್ಯ ಭೂಮಿಯನ್ನು ಉಪಯೋಗಿಸುವುದು ಕೇಂದ್ರ ಸರ್ಕಾರದ ಅರಣ್ಯ (ಸಂರಕ್ಷಣೆ) ಕಾಯ್ದೆ, 1980ರ ಸೆಕ್ಷನ್-2ರ ಪ್ರವದಾನಗಳು ಆಕರ್ಷಿಸುತ್ತವೆ. ಅದರಂತೆ ಅರಣ್ಯೇತರ ಚಟುವಟಿಕೆಗಳಿಗಾಗಿ ಅರಣ್ಯ ಭೂಮಿಯನ್ನು ಉಪಯೋಗಿಸ ಬೇಕಾದಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಅವಶ್ಯವಾಗುತ್ತದೆ.

ಸಂಖ್ಯೆ: ಅಪಜೀ 115 ಎಫ್‌ಜಿಎಲ್ 2018

(ಆರ್. ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಡ)	ಸುಮಾರು 40 ರಿಂದ 50 ವರ್ಷಗಳ ಹಿಂದೆ ಅಕ್ರಮಿಸಿ ಮನೆ ಕಟ್ಟಿಕೊಂಡ ಬಡ ಕುಟುಂಬಗಳಿಗೆ ಹಕ್ಕು ಪತ್ರಗಳನ್ನು ಕೊಡಲು ಇರುವ ನಿಯಮಗಳೇನು; ಇಲ್ಲವಾದಲ್ಲಿ, ಪರ್ಯಾಯ ವ್ಯವಸ್ಥೆಗಳೇನು; (ಪೂರ್ಣ ಮಾಹಿತಿ ಒದಗಿಸುವುದು)	• ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007 ರ 2)ರ ಅಡಿಯಲ್ಲಿ ದಿನಾಂಕ: 13.12.2005ಕ್ಕೂ ಹಿಂದಿನಿಂದ ಅರಣ್ಯ ಭೂಮಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಪಂಗಡದವರು ಮತ್ತು ಇತರೆ ಪಾರಂಪರಿಕ ನಿವಾಸಿಗಳು ಸದರಿ ಅವಧಿಗೂ ಮುನ್ನ ಕನಿಷ್ಠ ಮೂರು ತಲೆಮಾರುಗಳಿಂದ (ಒಂದು ತಲೆಮಾರು ಎಂದರೆ 25 ವರ್ಷಗಳು) ಅರಣ್ಯ ಭೂಮಿಯಲ್ಲಿ ವಾಸವಿದ್ದು ಮತ್ತು ಅದರ ಮೇಲೆ ಅವಲಂಬಿತರಾಗಿದ್ದರೆ ಅರಣ್ಯ ಹಕ್ಕಿಗೆ ಅರ್ಹರಾಗಿರುತ್ತಾರೆ. ಇದನ್ನು ಹೊರತುಪಡಿಸಿ ಇತರೆ ವರ್ಗದವರು ಬಡ ಕುಟುಂಬಕ್ಕೆ ಸೇರಿದ್ದು 40-50 ವರ್ಷಗಳಿಂದ ವಾಸವಿದ್ದರೂ ಸಹ ಸದರಿ ಕಾಯ್ದೆ ಅಡಿಯಲ್ಲಿ ಹಕ್ಕು ಪತ್ರ ಪಡೆಯಲು ಅರ್ಹರಾಗಿರುವುದಿಲ್ಲ. • ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007 ರ 2) ಪ್ರಕಾರ ಕಲಂ 4 ರ ಉಪ ಕಲಂ 5 ರನ್ವಯ ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾರೇ ಅರಣ್ಯ ವಾಸಿ ಅನುಸೂಚಿತ ಬುಟಕಟ್ಟಿನ ವ್ಯಕ್ತಿಯನ್ನು ಅಥವಾ ಇತರ ಪಾರಂಪರಿಕ ಅರಣ್ಯ ವಾಸಿಯ ಮಾನ್ಯತೆ ಮತ್ತು ಪರಿಶೀಲನಾ ಪ್ರಕ್ರಿಯೆಯು ಪೂರ್ಣವಾಗುವವರೆಗೆ ಅವನ ಅಧಿಭೋಗದಲ್ಲಿರುವ ಅರಣ್ಯ ಜಮೀನಿನಿಂದ ಒತ್ತುವರಿದಾರರನ್ನು ಒಕ್ಕಲೆಬ್ಬಿಸತಕ್ಕದ್ದಲ್ಲ ಅಥವಾ ಹೊರಹಾಕತಕ್ಕದ್ದಲ್ಲ. • ಮುಂದುವರೆದು ರಾಜ್ಯ ಸರ್ಕಾರದ ಆದೇಶ ಸಂಖ್ಯೆ ಅಪಜೀ 45 ಎಫ್‌ಜಿಎಲ್ 2015 ದಿನಾಂಕಃ 21.04.2015 ರನ್ವಯ 27.04.1978 ನಂತರ 3 ಎಕರೆವರೆಗೆ (ಜಮೀನು ಮತ್ತು ಒತ್ತುವರಿದಾರನ ಪಟ್ಟಾ ಜಮೀನು ಸೇರಿ) ಅರಣ್ಯ ಒತ್ತುವರಿ ಮಾಡಿರುವಂತಹ ಒತ್ತುವರಿದಾರರಿಗೆ ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಪ್ಯಾಕೇಜ್ ಕಲ್ಪಿಸುವವರೆಗೆ ಅಂತಹ ಪ್ರಕರಣಗಳಲ್ಲಿ ಒತ್ತುವರಿದಾರರನ್ನು ಒಕ್ಕಲೆಬ್ಬಿಸಬಾರದೆಂದು ತಿಳಿಸಲಾಗಿದೆ.
ಇ)	ಸರ್ಕಾರಿ ಕೆಲಸಗಳಿಗಾಗಿ ಅರಣ್ಯ ಇಲಾಖೆಯ ಭೂಮಿ ಪಡೆದುಕೊಳ್ಳುವಲ್ಲಿ ಇರುವ ನಿಯಮಗಳೇನು; ಶಾಲೆ, ಕುಡಿಯುವ ನೀರು, ವಿದ್ಯುತ್ ಕಂಬ ಅಳವಡಿಕೆ, ಕ್ರೀಡಾ ಮೈದಾನದಂತಹ ಕಾರ್ಯಗಳಿಗೆ ಇರುವ ನಿಯಮಗಳೇನು?	• ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007 ರ 2) ಪ್ರಕಾರ ಕಲಂ 3 ಉಪ ನಿಯಮ 2 ರಲ್ಲಿ ಅರಣ್ಯ (ಸಂರಕ್ಷಣಾ) ಅಧಿನಿಯಮ, 1980 (1980 ರ 69) ರಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು ನಿರ್ವಹಿಸುವ ಈ ಮುಂದಿನ ಸೌಲಭ್ಯಗಳಿಗಾಗಿ ಪ್ರತಿ ಹೆಕ್ಟೇರ್‌ಗೆ ಎಪ್ಪತ್ತೈದು ಮರಗಳನ್ನು ಮೀರದಂತೆ ಕಡಿಯುವುದಕ್ಕೆ ಅವಕಾಶವಿರುವ ಅರಣ್ಯ ಜಮೀನನ್ನು ಬಿಟ್ಟುಕೊಡಲು ಕೇಂದ್ರ ಸರ್ಕಾರವು ಅವಕಾಶ ಕಲ್ಪಿಸತಕ್ಕದ್ದು, ಎಂದರೆ:- (ಎ) ಶಾಲೆಗಳು; (ಬಿ) ಔಷಧಾಲಯ ಅಥವಾ ಆಸ್ಪತ್ರೆಗಳು; (ಸಿ) ಅಂಗನವಾಡಿಗಳು; (ಡಿ) ನ್ಯಾಯ ಬೆಲೆ ಅಂಗಡಿಗಳು; (ಇ) ವಿದ್ಯುತ್ ಹಾಗೂ ದೂರವಾಣಿ ಸಂಪರ್ಕಗಳು; (ಎಫ್) ಕೆರೆಗಳು ಮತ್ತು ಇತರ ಸಣ್ಣ ಜಲನಿಕಾಯಗಳು; (ಜಿ) ಕುಡಿಯುವ ನೀರು ಸರಬರಾಜು ಮತ್ತು ನೀರಿನ ಕೊಳವೆ ಮಾರ್ಗಗಳು; (ಹೆಚ್) ನೀರು ಅಥವಾ ಮಳೆ ನೀರು ಕೊಯ್ಲು ನಿರ್ಮಿತಿಗಳು; (ಐ) ಸಣ್ಣ ನೀರಾವರಿ ಕಾಲುವೆಗಳು; (ಜೆ) ಸಾಂಪ್ರದಾಯಿಕವಲ್ಲದ ಇಂಧನ ಮೂಲ;

			ವಿರಾಜಪೇಟೆ	605	1036.33
			ಮಡಿಕೇರಿ ವನ್ಯಜೀವಿ	22	22.57
			ಧಾರವಾಡ	148	18.79
			ಹಾವೇರಿ	95	5.53
			ಖಾನಾಪುರ	57	5.12
			ಸವದತ್ತಿ	11	2.20
			ರಾಮದುರ್ಗ	10	0.10
			ಬಾಗಲಕೋಟೆ	509	5.63
			ಬಾದಾಮಿ	4387	47.50
			ಜಮಖಂಡಿ	1986	23.02
			ತೇರದಾಳ	17899	344.02
			ಮುಧೋಳ	36	7.31
			ಬೀಳಗಿ	1032	15.65
			ಪುತ್ತೂರು	712	497.92
			ಸುಳ್ಯ	1055	663.46
			ಬಂಟ್ವಾಳ	388	98.31
			ಬೆಳ್ತಂಗಡಿ	542	359.59
			ಮೂಡಬಿದ್ರೆ	11	4.25
			ಕುಂದಾಪುರ	290	150.03
			ಉಡುಪಿ	141	61.569
			ಕಾಪು	55	20.28
			ಕಾರ್ಕಳ	226	87.98
			ಬೈಂದೂರು	418	248.22
			ರಾಯಚೂರು	82	1.62
			ಲಿಂಗಸೂಗೂರು	80	2.43
			ದೇವದುರ್ಗ	520	21.04
			ಮಾನವಿ	167	5.26
			ಜೇವರ್ಗಿ	63	12.10
			ಆಳಂದ	82	4.86
			ಚಿತ್ತಾಪೂರ	137	7.36
			ಚಿಂಚೋಳಿ	188	10.52
			ಚಿಂಚೋಳಿ.ವನ್ಯಜೀವಿ	978	32.50
			ಶಿವಮೊಗ್ಗ	52	2.58
			ಶಿವಮೊಗ್ಗ ಗ್ರಾಮಾಂತರ	1047	28.88
			ತೀರ್ಥಹಳ್ಳಿ	11319	1220.50
			ಸಾಗರ	9170	167.85
			ಶಿಕಾರಿಪುರ	3931	63.63
			ಸೊರಬ	2711	43.88
			ಭದ್ರಾವತಿ	70	0.77
			ತರೀಕೆರೆ	48	0.55
			ಚನ್ನಗಿರಿ	36	0.40
			ಒಟ್ಟು	**1,03,045**	**26,518.88**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2047**

ಸದಸ್ಯರ ಹೆಸರು : **ಶ್ರೀ ಸಿದ್ದು ಸವದಿ (ತೇರದಾಳ)**

ಉತ್ತರಿಸಬೇಕಾದ ದಿನಾಂಕ : 17-12-2018

ಉತ್ತರಿಸುವವರು : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

*****

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಅರಣ್ಯ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡು ವಾಸವಿರುವ ಕುಟುಂಬಗಳೆಷ್ಟು; ಎಷ್ಟು ಹೆಕ್ಟೇರ್ ಜಮೀನು ಅತಿಕ್ರಮಿಸಿದ್ದಾರೆ; (ಸಂಪೂರ್ಣ ಮಾಹಿತಿಯನ್ನು ಕ್ಷೇತ್ರವಾರು ಒದಗಿಸುವುದು)	ರಾಜ್ಯದಲ್ಲಿ ಒಟ್ಟು 1,03,045 ಕುಟುಂಬಗಳು ಅರಣ್ಯ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡು ವಾಸವಿದ್ದು, 26,518.88 ಹೆಕ್ಟೇರ್ ಜಮೀನು ಒತ್ತುವರಿಯಾಗಿರುತ್ತದೆ. ಸಂಪೂರ್ಣ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ:

ಕ್ಷೇತ್ರ	ಕುಟುಂಬಗಳ ಸಂಖ್ಯೆ	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
ಬೆಂಗಳೂರು ದಕ್ಷಿಣ	49	1.00
ಆನೇಕಲ್	97	0.84
ದೇವನಹಳ್ಳಿ	97	0.81
ದೊಡ್ಡಬಳ್ಳಾಪುರ	881	12.25
ಹೊಸಕೋಟೆ	86	2.60
ನೆಲಮಂಗಲ	21	0.02
ಮಾಗಡಿ	12	0.10
ರಾಮನಗರ	133	251.27
ಕನಕಪುರ	107	101.36
ಬಿಳಿಯೂರು	14	30.80
ಗಂಗಾವತಿ	260	9.60
ಕುಷ್ಟಗಿ	58	21.71
ಶಿರಸಿ	9150	4652.93
ಯಲ್ಲಾಪುರ	8890	5131.57
ಹಳಿಯಾಳ	1882	927.59
ಹೊನ್ನಾವರ	9259	3223.47
ಕಾರವಾರ	1580	466.93
ಕೆ.ಟಿ.ಆರ್.ದಾಂಡೇಲಿ	649	134.49
ಕೊಳ್ಳೇಗಾಲ	14	14.17
ಮಲೈ ಮಹದೇಶ್ವರ ಕೊಳ್ಳೇಗಾಲ	512	333.83
ಕಾವೇರಿ ವನ್ಯಜೀವಿ ಕೊಳ್ಳೇಗಾಲ	1895	1299.38
ಚಿಕ್ಕಮಗಳೂರು	33	4.97
ಮೂಡಿಗೆರೆ	101	69.35
ಶೃಂಗೇರಿ	736	78.72
ಮೈಸೂರು	673	585.60
ಹುಣಸೂರು	327	337.54
ಮಂಡ್ಯ	525	936.50
ಮಡಿಕೇರಿ	3688	2537.37

ಆ)	ಇದಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; ಬಿಡುಗಡೆಯಾಗಲು ಬಾಕಿ ಇರುವ ಅನುದಾನವೆಷ್ಟು; ಯಾವಾಗ ಬಿಡುಗಡೆ ಮಾಡಲಾಗುವುದು (ಕ್ಷೇತ್ರವಾರು ವಿವರ ನೀಡುವುದು);	ಕಾಡುಪ್ರಾಣಿಗಳಿಂದ ಉಂಟಾದ ಬೆಳೆ ಹಾನಿ ಹಾಗೂ ಪ್ರಾಣ ಹಾನಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರಧನ ವಿತರಿಸಲು ಚಾಮರಾಜನಗರ ಜಿಲ್ಲೆಗೆ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿದೆ.

ಕ್ರ ಸಂ	ಘಟಕ/ ವಿಭಾಗ	ಬಿಡುಗಡೆಯಾದ ಅನುದಾನ (ರೂ.ಗಳಲ್ಲಿ) 2015-16	2016-17	2017-18
1	2	3	4	5
1	ಬಿ.ಆರ್.ಟಿ ಹುಲಿ ಯೋಜನೆ, ಚಾಮರಾಜನಗರ.	1465146.00	1110288.00	1237000.00
2	ಮಲೆ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ.	861592.00	3229727.00	2306000.00
3	ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ.	470460.00	518950.00	711292.00
4	ಬಂಡೀಪುರ ಹುಲಿಯೋಜನೆ	4124179.00	6002810.00	3851499.00
	ಒಟ್ಟು	6921377.00	10861775.00	8105791.00

ಅನುದಾನ ಬಿಡುಗಡೆ ಮಾಡಲು ಯಾವುದೂ ಬಾಕಿ ಇರುವುದಿಲ್ಲ.

ಇ)	ಕಾಡಾನೆ ಹಾವಳಿ ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮವೇನು; ಇದಕ್ಕಾಗಿ ಎಷ್ಟು ಅನುದಾನ ಬಿಡುಗಡೆಯಾಗಿದೆ (ಕ್ಷೇತ್ರವಾರು ಪೂರ್ಣ ವಿವರ ನೀಡುವುದು)?	ಕಾಡಾನೆಗಳು ನಾಡಿಗೆ ಬಾರದಂತೆ ತಡೆಗಟ್ಟಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ:- 1) ಅರಣ್ಯ ಪ್ರದೇಶದ 'ಡಿ' ಲೈನ್‌ಗಳಲ್ಲಿ ಸೋಲಾರ್ ತಂತಿಬೇಲಿ ನಿರ್ಮಾಣ, ಆನೆತಡೆ ಕಂದಕ ಮತ್ತು ಜಾನುವಾರು ತಡೆ ಕಂದಕಗಳನ್ನು ನಿರ್ಮಾಣ ಮಾಡಲಾಗಿದೆ ಹಾಗೂ ಬಿದಿರು ಬೀಜಗಳ ಪುನರುತ್ಪತ್ತಿ ಪ್ರದೇಶದಲ್ಲಿ ಸೂಕ್ತ ರಕ್ಷಣೆ ನೀಡಿ ಬಿದಿರು ಸಸಿಗಳು ಪುನರುತ್ಪತ್ತಿಗೊಳ್ಳುವಲ್ಲಿ ಒತ್ತು ನೀಡಲು ಕ್ರಮಕೈಗೊಳ್ಳಲಾಗಿದೆ. 2) ಕಾಡಿನಲ್ಲಿ ನೀರಿನ ಕೊರತೆ ಮತ್ತು ಕಾಡಂಚಿನಲ್ಲಿ ರೈತರು ಬೆಳೆಯುವ ಕಬ್ಬು, ಬಾಳೆಯಂತಹ ಆಕರ್ಷಕ ಬೆಳೆಗಳಿಂದಾಗಿ ಕಾಡಿನಿಂದ ಕಾಡಾನೆಗಳು ನಾಡಿಗೆ ಬರುತ್ತವೆ. ಇದನ್ನು ತಪ್ಪಿಸಲು ಅರಣ್ಯ ಪ್ರದೇಶಗಳಲ್ಲಿ ಸಾಕಷ್ಟು ನೀರು ಲಭ್ಯವಾಗುವಂತಹ ಕಾಮಗಾರಿಗಳಾದ ಆಯ್ದ ಪ್ರದೇಶಗಳಲ್ಲಿ ಹೊಸ ಕೆರೆಗಳ ನಿರ್ಮಾಣ ಮಾಡುವುದು, ಹಾಲಿ ಇರುವ ಕೆರೆಗಳ ಹೂಳೆತ್ತುವುದು, ತಾತ್ಕಾಲಿಕ ನೀರಿನ ಪಾಂಡ್‌ಗಳನ್ನು ನಿರ್ಮಾಣ, ಚೆಕ್‌ಡ್ಯಾಂಗಳ ನಿರ್ಮಾಣ ಮಾಡುವ ಕಾಮಗಾರಿಗಳನ್ನು ಅರಣ್ಯ ಪ್ರದೇಶದಲ್ಲಿ ಕೈಗೊಳ್ಳಲಾಗಿರುತ್ತದೆ. 3) ಕಾಡಾನೆ ಹಾವಳಿಯನ್ನು ತಡೆಗಟ್ಟಲು ಆನೆ ಹಿಮ್ಮೆಟ್ಟಿಸುವ ತಂಡಗಳನ್ನು ನೇಮಿಸಿ ಆನೆಗಳನ್ನು ಕಾಡಿಗೆ ಓಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಕ್ರ ಸಂ.	ಕೈಗೊಂಡ ಕ್ರಮ	ಭೌತಿಕ ಪರಿಮಾಣ (ಕಿಲೋ ಮೀಟರ್‌ಗಳಲ್ಲಿ) 2015-16	2016-17	2017-18	2018-19	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) 2015-16	2016-17	2017-18	2018-19
1	ಆನೆ ತಡೆ ಕಂದಕಗಳ ಬಲಪಡಿಸುವಿಕೆ	18.050	19.657	4.650	1.75	276.170	113.780	75.190	15.360
2	ರೈಲ್ವೆ ಬ್ಯಾರಿಕೇಡ್ ನಿರ್ಮಾಣ	3.493	8.869	0.400	1.31	125.00	367.800	41.136	58.95
3	ರೈತರ ಜಮೀನುಗಳಲ್ಲಿ ಸೋಲಾರ್ ತಂತಿ ಬೇಲಿ ನಿರ್ಮಾಣ 50:50	13.815	14.657	2.145	22.20	27.020	26.830	3.60	103.92

ಸಂಖ್ಯೆ: ಅಪಜೀ 112 ಎಫ್‌ಪಿಸಿ 2018

(ಆರ್. ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 2ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1206
2) ಸದಸ್ಯರ ಹೆಸರು	:	ಶ್ರೀ ಸಿ. ಎಸ್. ನಿರಂಜನ್ ಕುಮಾರ್ (ಗುಂಡ್ಲುಪೇಟೆ)
3) ಉತ್ತರಿಸುವ ದಿನಾಂಕ	:	17.12.2018
4) ಉತ್ತರಿಸುವವರು	:	ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಕಾಡಾನೆ ಹಾಗೂ ಹಂದಿಗಳ ಹಾವಳಿಗಳಿಂದ ಎಷ್ಟು ಎಕರೆ ಬೆಳೆ ಹಾಗೂ ಪ್ರಾಣಹಾನಿ ಸಂಭವಿಸಿದೆ (ಕ್ಷೇತ್ರವಾರು ವಿವರ ನೀಡುವುದು);	ಚಾಮರಾಜನಗರ ಅರಣ್ಯ ವೃತ್ತದ ಆಡಳಿತ ವ್ಯಾಪ್ತಿಯ ಚಾಮರಾಜನಗರ ಜಿಲ್ಲೆಯಲ್ಲಿ 2015-16ನೇ ಸಾಲಿನಿಂದ 2017-18ನೇ ಸಾಲಿನವರೆಗೆ ಕಾಡಾನೆ ಹಾಗೂ ಹಂದಿಗಳ ಹಾವಳಿಗಳಿಂದ ಉಂಟಾದ ಬೆಳೆ ಹಾನಿ ಹಾಗೂ ಪ್ರಾಣ ಹಾನಿಗಳ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ:-

ಕ್ರ ಸಂ	ಘಟಕ/ ವಿಭಾಗ	ಕಾಡುಪ್ರಾಣಿಗಳಿಂದ ಉಂಟಾದ ಬೆಳೆ ನಷ್ಟ		ಕಾಡು ಪ್ರಾಣಿಗಳಿಂದ ಉಂಟಾದ ಪ್ರಾಣಹಾನಿ (ಪ್ರಕರಣಗಳು)
		ಎಕರೆ	ಪ್ರಕರಣಗಳ ಸಂಖ್ಯೆ	
1	2	3	4	5
		2015-16		
1.	ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ.	18.00	60	02
2.	ಮಲೆ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ	41.02	20	02
3.	ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ.	9.15	38	-
4.	ಬಂಡೀಪುರ ಹುಲಿಯೋಜನೆ	-	1634	-
	ಒಟ್ಟು	**68.17**	**1752**	**04**
		2016-17		
1.	ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ.	38.00	141	01
2.	ಮಲೆ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ.	319.95	111	05
3.	ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ.	35.10	106	-
4.	ಬಂಡೀಪುರ ಹುಲಿಯೋಜನೆ	-	1443	02
	ಒಟ್ಟು	**393.05**	**1801**	**08**
		2017-18		
1	ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ.	31.00	112	01
2.	ಮಲೆ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ.	348.19	202	01
3.	ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ.	18.63	29	-
4	ಬಂಡೀಪುರ ಹುಲಿಯೋಜನೆ	-	947	01
	ಒಟ್ಟು	397.82	1290	03

		ಈ ಯೋಜನೆಗಳ ಬಗ್ಗೆ ಅಭಿಪ್ರಾಯವನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆ.
ಇ)	ಕೇಂದ್ರ ಪರಿಸರ ಮಾಲಿನ್ಯ ಮಂಡಳಿ ಮತ್ತು ಪರಿಸರ ಇಲಾಖೆಗಳಿಂದ ಬಂದಿರುವ ಸೂಚನೆಗಳೇನು; ಸೂಚನೆ ಪಾಲನೆಗೆ ವಿವಿಧ ಇಲಾಖೆಗಳ ಸಮನ್ವಯ ಸಮಿತಿ ರಚನೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಯಾವಾಗ ಸಭೆ ನಡೆಯಿತು (ವಿವರ ನೀಡುವುದು);	ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಯನ ಪ್ರಕಾರ ರಾಜ್ಯದ 4 ನಗರಗಳಾದ ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ದಾವಣಗೆರೆ ಮತ್ತು ಗುಲ್ಬರ್ಗ ನಗರಗಳನ್ನು ಹೆಚ್ಚು ವಾಯು ಮಾಲಿನ್ಯ (Non-attainment cities) ಹೊಂದಿರುವ ನಗರಗಳೆಂದು ಗುರುತಿಸಿದೆ. ವಾಯು ಕಾಯ್ದೆ 1981 ರ ಸೆಕ್ಷನ್ 18(1)(ಬಿ) ಅಡಿಯಲ್ಲಿ ಮಾಲಿನ್ಯ ಹೆಚ್ಚಿರುವ 4 ನಗರಗಳಾದ ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ದಾವಣಗೆರೆ ಮತ್ತು ಗುಲ್ಬರ್ಗ ನಗರಗಳಲ್ಲಿ ವಾಯು ಮಾಲಿನ್ಯ ನಿಯಂತ್ರಿಸಲು ಕ್ರಿಯಾ ಯೋಜನೆಗಳನ್ನ ರೂಪಿಸಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡಿದೆ. ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಈ ಕೆಳಗಿನ ಮೂರು ಸಮಿತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. 1. ಕಾರ್ಯಪಡೆ (Task Force Committee) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ W.P.No.13029 / 1985 (Civil-PIL) ನಿರ್ದೇಶನದಂತೆ,
		ಸರ್ಕಾರದ ಆದೇಶ ಸಂಖ್ಯೆ: ಅಪಜೀ/183/ಇಎನ್‌ವಿ/2001, ದಿನಾಂಕ:10.09.2001 ರಲ್ಲಿ ಪ್ರಥಮವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ (Task Force) ಯನ್ನು ರಚಿಸಿದೆ. ಪ್ರಸ್ತುತ ಸದರಿ ಕಾರ್ಯಪಡೆಯ ಅಧ್ಯಕ್ಷತೆಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ವಹಿಸಿರುತ್ತಾರೆ. 2. ಸಮನ್ವಯ ಸಮಿತಿ (Co-ordination Committee) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ WP No. 39423/2013, Suo Moto V/s State of Karnataka ನಿರ್ದೇಶನದಂತೆ, -ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಇಲಾಖೆಗಳನ್ನೊಳಗೊಂಡ ಸಮನ್ವಯ ಸಮಿತಿಯನ್ನು ದಿನಾಂಕ:2.4.2014 ರಲ್ಲಿ ರಚಿಸಲಾಗಿದೆ. ಇದುವರೆಗೂ ಒಟ್ಟು 19 ಸಭೆಗಳು ನಡೆದಿದ್ದು, ವಾಯುಮಾಲಿನ್ಯ ನಿಯಂತ್ರಣದ ನಿಟ್ಟಿನಲ್ಲಿ

		ಸಮಿತಿಯು ಕಾರ್ಯನಿರ್ವಹಿಸುತ್ತಿದೆ. ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ, ಮಂಡಳಿಯು ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ನಿಯಂತ್ರಿಸಲು ಸಾರಿಗೆ ಇಲಾಖೆ, ಬಿ.ಬಿ.ಎಂ.ಪಿ ಹಾಗೂ ಪೋಲಿಸ್ ಇಲಾಖೆಗಳಿಗೆ ವಾಯು ಕಾಯ್ದೆ, 1981 ರ ಸೆಕ್ಷನ್ 31(ಎ) ಅಡಿಯಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ದಿನಾಂಕ:28.3.2014 ರಲ್ಲಿ ನಿರ್ದೇಶಿಸಿದೆ. 3. ವಾಯು ಗುಣಮಟ್ಟ ಮಾಪನ ಸಮಿತಿ (Air Quality Monitoring Committee) ದಿನಾಂಕ: 8.10.2018 ರಂದು, ಮಾನ್ಯ ಹಸಿರು ನ್ಯಾಯ ಪೀಠ, ನವದೆಹಲಿ, ನಾನ್ ಅಟೇನ್ಮೆಂಟ್ ನಗರಗಳ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಸಮಗ್ರ ಕ್ರಿಯಾ ಯೋಜನೆಯನ್ನು ರೂಪಿಸಲು ರಾಜ್ಯದಲ್ಲಿ ಈ 6 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲು ಆದೇಶವನ್ನು ಹೊರಡಿಸಿದೆ. ಸದರಿ ನಿರ್ದೇಶನದಂತೆ ರಾಜ್ಯ ಸರ್ಕಾರವು ನವೆಂಬರ್ 24, 2018 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಜೀವಿಪರಿಸ್ಥಿತಿ ಮತ್ತು ಪರಿಸರ)ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ 6 ಸದಸ್ಯರನ್ನೊಳಗೊಂಡ ಸಮಿತಿಯನ್ನು "ವಾಯು ಗುಣಮಟ್ಟ ಮಾಪನ ಸಮಿತಿ" ಯನ್ನು ರಚಿಸಿದೆ. ಸದರಿ ಸಮಿತಿಯು ದಿನಾಂಕ: 3.12.2018 ರಂದು ಸಭೆ ನಡೆಸಿ, 48 ಅಂಶಗಳ ಕರಡು ಕ್ರಿಯಾ ಯೋಜನೆಗಳನ್ನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ, ನಿಗಧಿತ ಅವಧಿಯೊಳಗೆ ಅನುಷ್ಠಾನಗೊಳಿಸಲು ತೀರ್ಮಾನಿಸಿರುತ್ತದೆ.
ಈ)	ರಾಜ್ಯದಲ್ಲಿ ಮಾಲಿನ್ಯ ನಿಯಂತ್ರಣ ಸೆಸ್, ಪರಿಸರ ಸೆಸ್, ಹಸಿರು ಸೆಸ್ ಹೀಗೆ ಯಾವ ಯಾವ ಸೆಸ್ಗಳನ್ನು ಸಂಗ್ರಹಿಸಲಾಗುತ್ತಿದೆ; ಎಷ್ಟು ಸಂಗ್ರಹಿಸಲಾಗಿದೆ; ಆ ಹಣವನ್ನು ಹೇಗೆ ಖರ್ಚು ಮಾಡಲಾಗುತ್ತಿದೆ;	ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಜಲ ಉಪಕರ ಕಾಯ್ದೆ, 1977ರ ಪ್ರಕಾರ (ಜಲ ಉಪಕರ ಕಾಯ್ದೆ, 1977ರ ನಿಯಮ 17ರಂತೆ) ಕೈಗಾರಿಕೆಗಳಿಂದ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಜಲ ಉಪಕರವನ್ನು ಮಾತ್ರ ಸಂಗ್ರಹಿಸಲಾಗುತ್ತಿರುತ್ತದೆ. ಹೀಗೆ ಸಂಗ್ರಹಿಸಲಾದ ಜಲ ಉಪಕರವನ್ನು ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಸಂಚಿತ ನಿಧಿಗೆ ಪಾವತಿ ಮಾಡುತ್ತಿದ್ದು, ಪಾವತಿ ಮಾಡಲಾದ ಜಲಕರ ಸಂಗ್ರಹಣಾ ಮೊತ್ತದಲ್ಲಿ ಶೇ.80ರಷ್ಟು ಕೇಂದ್ರ ಸರ್ಕಾರದಿಂದ ಹಿಂಪಾವತಿ ಪಡೆಯಲಾಗುತ್ತಿರುತ್ತದೆ. ಕೇಂದ್ರ ಸರ್ಕಾರದಿಂದ ಜಲ ಉಪಕರ ಹಿಂಪಾವತಿ ಮೊತ್ತಗಳಲ್ಲಿ ಮಾಲಿನ್ಯ ನಿಯಂತ್ರಣ ಕ್ರಮಗಳು, ಕಛೇರಿ ಸ್ಥಾಪನೆ ಹಾಗೂ

		ನಿರ್ವಹಣಾ ವೆಚ್ಚ, ಮಾಹಿತಿ ತಂತ್ರಜ್ಞಾನ ಮತ್ತು ಇ-ಆಡಳಿತ ಯೋಜನೆಗಳು, ವೈಜ್ಞಾನಿಕ/ತಾಂತ್ರಿಕ ಹಾಗೂ ಮಾನವ ಸಂಪನ್ಮೂಲ ವೆಚ್ಚಗಳಿಗೆ ವಿನಿಯೋಗಿಸಲಾಗಿದೆ. ಪರಿಸರಕ್ಕೆ ಸಂಬಂಧಿಸಿದಂತೆ, ಜಾಗೃತಿ/ ತರಬೇತಿ ಕಾರ್ಯಕ್ರಮಗಳು ಹಾಗೂ ರಾಜ್ಯಾದ್ಯಾಂತ ಶಾಲಾ/ ಕಾಲೇಜುಗಳಿಗೆ ಪರಿಸರ ಮಿತ್ರ ಶಾಲಾ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುವುದು. ಕೇಂದ್ರ ಸರ್ಕಾರವು ದಿನಾಂಕ: 01.07.2017 ರಿಂದ ಅನ್ವಯವಾಗುವಂತೆ ದೇಶದಾದ್ಯಂತ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯನ್ನು ಅನುಷ್ಠಾನಗೊಳಿಸಿ, ಜಲಕರವನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ವಿಲೀನಗೊಳಿಸಿರುತ್ತಾರೆ. ಈ ಸಂಬಂಧವಾಗಿ ದಿನಾಂಕ:01.07.2017 ರಿಂದ ಯಾವುದೇ ಜಲ ಉಪಕರವನ್ನು ಸಂಗ್ರಹಿಸಲಾಗುತ್ತಿರುವುದಿಲ್ಲ. ಆದುದರಿಂದ, ದಿನಾಂಕ:30.06.2017ರವರೆಗೆ ಸಂಗ್ರಹಿಸಲಾದ ಜಲ ಉಪಕರವನ್ನು ಕೇಂದ್ರ ಸರ್ಕಾರಕ್ಕೆ ಪಾವತಿ ಮಾಡಿದ್ದು, ಸದರಿ ಅವಧಿಯವರೆಗೆ ಮಂಡಳಿಗೆ ರೂ.951,55,999/-ಗಳು ಕೇಂದ್ರ ಸರ್ಕಾರದಿಂದ ಬಾಕಿ ಉಳಿದಿರುತ್ತದೆ.
ಉ)	ನಗರೀಕರಣದಿಂದ ಆಗುತ್ತಿರುವ ವಾಯು ಮಾಲಿನ್ಯವನ್ನು ತಡೆಯುವ ಕ್ರಮಗಳೇನು;	ನಗರೀಕರಣದಿಂದ ಆಗುತ್ತಿರುವ ವಾಯು ಮಾಲಿನ್ಯವನ್ನು ತಡೆಗಟ್ಟಲು ರಾಜ್ಯ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕೈಗೊಂಡ ಕ್ರಮಗಳ ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.

ಸಂಖ್ಯೆ: ಅಪಜೀ 229 ಇಪಿಸಿ 2018

(ಆರ್. ಶಂಕರ್)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

ಅನುಬಂಧ-1

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾಯೋಜಿತ ರಾಷ್ಟ್ರೀಯ ವಾಯು ಗುಣಮಟ್ಟ ಪರಿಶೀಲನಾ ಕಾರ್ಯಕ್ರಮದ (NAMP) ಅಡಿಯಲ್ಲಿ ಬೆಂಗಳೂರು ನಗರವಲ್ಲದೇ ರಾಜ್ಯದ ಪ್ರಮುಖ ನಗರಗಳ ವಾಯು ಗುಣಮಟ್ಟವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾಪನ ಮಾಡಲಾಗುತ್ತಿದೆ.

ಬೆಂಗಳೂರು ನಗರದ ವಾಯು ಗುಣಮಟ್ಟವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಯಂತೆ 21 ಕೇಂದ್ರಗಳಲ್ಲಿ ಮಾಪನ ಮಾಡಲಾಗುತ್ತಿದೆ. 21 ಕೇಂದ್ರಗಳ ಪೈಕಿ 7 ನಿರಂತರ ವಾಯು ಮಾಪನ ಕೇಂದ್ರಗಳಲ್ಲಿ ಸತತ ಇಪ್ಪತ್ನಾಲ್ಕು ಗಂಟೆಗಳ ಕಾಲ ಗಂಧಕದ ಡೈಆಕ್ಸೈಡ್ (SO_2) ಸಾರಜನಕದ ಡೈಆಕ್ಸೈಡ್ (NO_2), ಧೂಳಿನ ಕಣಗಳು, (PM_{10}) ಧೂಳಿನ ಕಣಗಳು, ($PM_{2.5}$) ಇಂಗಾಲದ ಮಾನಾಕ್ಸೈಡ್ (CO), ಓಜೋನ್ (O3), ಅಮೋನಿಯಾ (NH3) ಮತ್ತು ಬೆನ್‌ಜೀನ್ (Benzene) ಸೇರಿದಂತೆ ಎಂಟು ಮಲಿನ ಕಾರಕಗಳನ್ನು ಮಾಪನ ಮಾಡಲಾಗುತ್ತಿದೆ ಹಾಗೂ 14 ಮಾನವ ಚಾಲಿತ ಕೇಂದ್ರಗಳಲ್ಲಿ (Manual Stations) 24 ಗಂಟೆಗಳ ಕಾಲ, ವಾರಕ್ಕೆ 2 ಬಾರಿ, ಗಂಧಕದ ಡೈ ಆಕ್ಸೈಡ್ (SO_2), ಸಾರಜನಕದ ಡೈ ಆಕ್ಸೈಡ್ (NO_2), ಧೂಳಿನ ಕಣಗಳ ಗಾತ್ರ 10 ಮೈಕ್ರಾನ್ ಹಾಗೂ 2.5 ಮೈಕ್ರಾನ್ (PM_{10}), ($PM_{2.5}$), ಅಮೋನಿಯ ಮತ್ತು ಸೀಸ ಮಲಿನಕಾರಕಗಳನ್ನು ವಿಶ್ಲೇಷಿಸಲಾಗುತ್ತಿದೆ.

